"ತಾರಿಣಿ"

33, 4ನೇ ಮೈನ್, ಸರಸ್ವತಿಪುರಂ

ಮೈಸೂರು-೯.

ಸೂಕ್ತಿ ಸುಧೆ

(ಸರ್ವೇಶ ಪದಗಳು)

ಬಸರಾಳು ಶ್ರೀಕಂಠಯ್ಯ

"ತಾರಿಣಿ"
33, 4ನೇ ಮೈನ್, ಸರಸ್ವತಿಪುರಂ
ಮೈಸೂರು-೯.

SOOKTHI SUDHE : by Basaralu Sreekantaiah
Published by "Tharini" No. 33. IV Main
Saraswathipuram, Mysore-9.

ಬೆಲೆ 5 ರೂ

Printed at :

Poornima Enterprises, Printers & Publishers,
Mysore-1

ಮುನ್ನುಡಿ

ಬಿ. ಶ್ರೀಕಂಠಯ್ಯನವರೂ ನಾನೂ ಚಿಕ್ಕಂದಿನಿಂದ ಗೆಳೆಯರು; ಶ್ರೀರಂಗಪಟ್ಟಣದಲ್ಲಿ ಬೆಳೆದವರು. ಅವರ ಕನ್ನಡಪ್ರೇಮವನ್ನೂ (೨ನೆಯ ಅನುಬಂಧದಲ್ಲಿ ಸೂಚಿಸಿರುವ) ಲಿಪಿಸಂಸ್ಕರಣದ ಪ್ರಸಾರಣವನ್ನೂ ಮೊದಲಿಂದಲೂ ನೋಡಿ ಸಂತೋಷಪಡುತ್ತಿರುವೆನು. ಹೀಗೇ ಸರಿ ಎಂದಲ್ಲ, ಕನ್ನಡಕ್ಕಾಗಿ ದುಡಿಯುತ್ತಿರುವರಲ್ಲಾ ಎಂದು. ಇವರ ಇಂಥ ದುಡುಮೆಯ ಫಲಗಳಲ್ಲೊಂದು ಈ **ಸೂಕ್ತಿಸುಧೆ.**

ಈ ಗ್ರಂಥದಲ್ಲಿ ಮನೋಜ್ಞವಾದ ವಿಷಯಗಳು ತುಂಬಿವೆ. ಇಲ್ಲಿನ ೧೫ ಪದ್ಧತಿಗಳನ್ನು ಮೂರು ಪಂಚಕಗಳಾಗಿ ಭಾಗಿಸಬಹುದು. ಮೊದಲಪಂಚಕ ಬಾಲ್ಯಕ್ಕೂ, ನಡುವಣದು ತಾರುಣ್ಯಕ್ಕೂ, ಕಡೆಯದು ವಾರ್ಧಕಕ್ಕೂ ಹೊಂದುವುವು.

ಈ ಪದ್ಯಗಳು ಮುತ್ತುಗಳಂತಿವೆಯಲ್ಲವೆ? ಇವು ಯಾರ ಕೊರಳಿಗೆ ಅಂದವಾಗಲಾರವು!

ಜನರೆಲ್ಲ ನಗುತಿರಲು । ಜನನದಲೆ ನಾನತ್ತೆ ; ॥
ಜನಹಿತವ ಗೈಸಿ ಬಾಳಿಸೊ ; ಮಡಿವಲ್ಲಿ ।
ಜನರಳಲಿ ನನಗೆ ಸರ್ವೇಶ ॥೨೬೦॥

ಮಡಿವನಕ ಹೃದ್ಯಂತ್ರ । ನಡೆಯುತಿರೆ ಕರ್ಮಕ್ಕೆ ॥
ಬಿಡುವುಂಟೆ? ಫಲದಾಶೆಯನು ತೊಡೆಯುತ್ತ ।
ತೊಡಗಲೇ ಬೇಕು ಸರ್ವೇಶ ॥೨೬೫॥

ಮರವಿರದೆ ಕಾಡಹುದೆ? । ನರರಿರದೆ ನಾಡಹುದೆ? ॥
ವರನಿರದೆ ಮದುವೆಯೆ? ಧುರವೆ ಬಲವಿರದೆ? ।
ಗುರುವಿರದೆ ಪರವೆ? ಸರ್ವೇಶ ॥೨೯೮॥

ಕುರಿಮರಿಯ ಕಂಕುಳಲಿ । ಇರುಕಿದ್ದು ಎಲ್ಲೆಲ್ಲು ॥
ಅರಸುತಿಹ ಕುರುಬನ ತೆರದೆ ಪರಮನನು ।
ಹೊರಗೆ ಹುಡುಕುವರೆ? ಸರ್ವೇಶ ॥೩೦೩॥

ಇವರ ಕನ್ನಡದ ಉಜ್ಜ್ವಲಭಕ್ತಿ ಈ ಪದ್ಯಗಳಲ್ಲಿ ಹೊಮ್ಮಿ ಕಾಣುವುದು—

ಒಡೆತನದ ಪರಭಾಷೆ | ಎಡಬಲದ ಕಗ್ಗಗಳು ||
ಇಡಿನಾಡ ಹಿಂದಿ ಬಡಿವವು ಕನ್ನಡಿಗ |
ಬಡತಾಯ ಬಾಯ ಸರ್ವೇಶ ||೨೮||

ಕನ್ನಡಿಗ ಜನಪತಿಗೆ |
ಕನ್ನಡದ ಜನಪದಕೆ ||
ಕನ್ನಡಿಗ ಕವಿಗೆ |
ಕನ್ನಡ ಸಂಸ್ಕೃತಿಗೆ |
ಮುನ್ನ ಜಯವಕ್ಕೆ ಸರ್ವೇಶ ||

ಪೀಠಿಕೆಯ ತುದಿಯಲ್ಲಿ ತಪ್ಪುಗಳನ್ನು ತಿದ್ದಿಕೊಡಬೇಕಾಗಿ ಪ್ರಾಜ್ಞರನ್ನು ಪ್ರಾರ್ಥಿಸಿರುವರು. ಏನಿದ್ದರೂ, ಸುಧಾರಣೆ ಮುಂದಿನ ಮುದ್ರಣಕ್ಕಷ್ಟೆ? ಥಾಮಸ್ ಕಾರ್ಲೈಲ್ (ಪುಟ ೬೮)—

"If a book come from the heart, it will contrive to reach other hearts; all art and author-craft are of small account to that."

ಎಂದಿರುವನು. ಇದನ್ನು ಶ್ರೀಕಂಠಯ್ಯನವರೇ ಹೀಗೆ ಕನ್ನಡಿಸಿರುವರು—

ಹೃದಯದಿಂ ಚಿಮ್ಮಿದುದು! ಸದಯರಾ ಎದೆಹೊಕ್ಕು ||
ಹುದುಗದೇಂ? ಕವನದ ಹುಟ್ಟು ಕಟ್ಟುಗಳ |
ಹದನು ಹೆಚ್ಚೇನು? ಸರ್ವೇಶ ||

ಅಂತೆ ದೋಷಗಳನ್ನು ಬಿಟ್ಟು ಗುಣವನ್ನು ಸಹೃದಯರು ಸ್ವೀಕರಿಸಬೇಕು.

ಸರ್ವಜ್ಞನು ನಮ್ಮಲ್ಲಿ ಒಂದು ರತ್ನ; ಅವನ ವೀಣೆಯನ್ನು ಮೀಟುವ ಶಿಷ್ಯರೂ ಜನರಿಗೆ ಪ್ರಿಯರಾದಾರೆಂದು ಹಾರೈಸುತ್ತೇನೆ.

ಮೈಸೂರು,
೩೦-೭-೧೯೩೮.

ಬಿ. ಎಂ. ಶ್ರೀಕಂಠಯ್ಯ,
Professor of English,
Central College, Bangaloer.

ವಂದನೆಗಳು

ಸ್ವಕೀಯ ಸುಜ್ಞಾನವು ಕಣ್ಣಿನಂತೆಯೂ, ಬಾಹ್ಯಪ್ರಪಂಚದಿಂದ ಲಭಿಸುತ್ತಿರುವ ಜ್ಞಾನವು ಹೊರಬೆಳಕಿನಂತೆಯೂ ಇವೆ. ಬಿಟ್ಟಕಣ್ಣಿಗೆ ಬೆಳಕು ತಟ್ಟದಿರದು. ಗ್ರಂಥವು ಎಷ್ಟು ಸ್ವತಂತ್ರವೆನಿಸಿದ್ದರೂ ಅದರ ಮೇಲೆ ಪರಪ್ರತಿಭೆಯು ಬೀಳುವುದುಂಟು. ಆದುದರಿಂದ ಜ್ಞಾತಾಜ್ಞಾತ ಜ್ಞಾನಪ್ರದಾತರಿಗೆಲ್ಲಾ ಮೊದಲೇ ವಂದಿಸುವೆನು.

ಮುದ್ರಣಾಲಯದ ಯಜಮಾನರಾದವರೇ ಸ್ವತಃ ಗ್ರಂಥಕರ್ತರೂ, ಭಾಷಾಭಿಮಾನಿಗಳೂ, ವಿಶಾಲಹೃದಯರೂ ಆಗಿದ್ದು–ಅವರ ಸಹಾಯ ದೊರೆತಲ್ಲಿ ಇತರ ಲೇಖಕರ ಬವಣೆಯು ಎಷ್ಟೋ ತಗ್ಗುವುದು. ಏತದ್ಗುಣೋಪೇತರೂ ತ್ರಿಭಾಷಾವಿಶಾರದರೂ ಆದ ವೇ॥ ಪ॥ ಕಾಶೀನಾಥ ಶಾಸ್ತ್ರಿಗಳರೂಪದಲ್ಲಿ ದೊರೆತದ್ದು ನನ್ನ ಸುಯೋಗವು. ಇವರು ಬೇಸರ ಗೊಳ್ಳದೆ ಕರಡನ್ನು ಓದಿ ಉತ್ತಮಗೊಳಿಸಲು ಸಲಹೆಯಿತ್ತು, ಸುಲಭ ವಾಗಿಯೂ ಸೊಗಸಾಗಿಯೂ ಪುಸ್ತಕ ಮಾಡಿಕೊಟ್ಟುದಕ್ಕೆ ನಾನು ಚಿರಋಣಿ.

ಮುಃಹೊತ್ತಗೆ (Advance Copy) ಯನ್ನು ಪರಿಶೀಲಿಸಿ ತಮ್ಮ ಬೆಲೆಯುಳ್ಳ ಮುನ್ನುಡಿ ಒಳ್ನುಡಿಗಳ* ರೂಪದಲ್ಲಿ ಈ ಗ್ರಂಥಕ್ಕೆ ಮೆಚ್ಚಿಗೆಯ ಮುದ್ರೆಯೊತ್ತಿದ ಪ್ರೊಫೆಸರ್ ಬಿ. ಎಂ. ಶ್ರೀಕಂಠಯ್ಯ, ಎಂ.ಎ.,ಬಿ.ಎಲ್., ರವರೆ ಮೊದಲಾದ ಎಲ್ಲ ವಿದ್ವನ್ಮಣಿಗಳಿಗೂ ನನ್ನ ಅನಂತ ವಂದನೆಗಳು.

ಬಿ. ಶ್ರೀಕಂಠಯ್ಯ,

1301, ಸಾವಿತ್ರೀಸದನ, ಭಕ್ಷೀನರಸಪ್ಪನವರ ಅಗ್ರಹಾರ,

ಇಲವಾಲದ ರಸ್ತೆ, ಮೈಸೂರು.

---

* ೯೩ ನೆಯ ಪುಟದಲ್ಲಿ ವಿಮರ್ಶೆಗಳಿವೆ.

ಸ್ಖಾಲಿತ್ಯಗಳು (Errata)

		ತಪ್ಪು	ಒಪ್ಪು
ಪುಟ ii	೨ ನೇ ಪ್ಯಾರ, ೨ ನೇ ಸಾಲು	ಖಂಡವಾಕ್ಯ	ಖಂಡಕಾವ್ಯ
,, iv	ಬುಡದಿಂದ ೩ ನೆ ಸಾಲು	ಭಾವಿಸುವವರು.	ಭಾವಿಸುವವರು
ಪದ್ಯ	ಪಾದ		
೩೨	೪	ಉಳಿಸ್ಕೆ	ಉಳಿಸೊ
೯೩	೨	ಬರುದಿನವೆ	ಒರುದಿನವೆ
೨೩೪	೨	ಹಣಕ್ಕ ಣೆ	ಹೆಣಕ್ಕೆ ಣೆ
೨೭೪	೨	ನೆಲ್ಲು	ನೆಲ್ಲ (ಗೋಗಾತ್ರ)
೩೦೦	೧	ಕಣ್ಣೆ ದು	ಕಣ್ಣೆ ದ್ದು
೩೦೪	೧	ಕಸ್ತೂರಿಯು	ಕಸ್ತೂರಿ
,,	೩	ನಿನ್ನಲ್ಲೆ	ತನ್ನಲ್ಲೆ
೩೧೪	೪	ಲಕ್ಷಿಸನೆ	ಲಕ್ಷಿಸೆಯ ?
೩೧೮	೨	ಶಮಾಧಿಯು	ಶಮಾದಿಯು
ಪುಟ	ಸಾಲು		
೯೭	೨೧	through	thought

" In an attempt to criticise another's look,
the range of knowledge possessed by the
critic is as essential a part of his verdict
as the claims of the book itself."

—SCHOPEN HAUER.

* * *

" Reviewing has one advantage over suicide:
In suicide you take it out of yourself;
in reviewing you take it out of other people."

—BERNARD SHAW.

* * *

" What rage for fame attends both great and small!
Better be damned than mentioned not at all."

—JOHN WOLCOT.

* * *

" Criticism from an egotist is praise indeed."

* * *

ಶರವುದಿಸೆ* ಬಹುಧಾನ್ಯ ।
ವರುಷದಲಿ, ನಾಲ್ವಡಿಯ ॥
ವರಕೃಷ್ಣನೃಪನಿರೆ ಸಿಂಹಪೀಠದಲಿ, ।
ಹೊರಬಿತ್ತು ಚಾರು **ಸೂಕ್ತಿಸುಧೆ** ॥

---

* ಶರನ್ನವರಾತ್ರಿಯ ಪಾಡ್ಯದಂದು=24-9-1938 ರಲ್ಲಿ

ಪೀಠಿಕೆ.

ಇಂದ್ರಿಯವಶರಾದ ಸುರರು, ಕ್ರೂರಾತ್ಮರಾದ ಅಸುರರು ಮತ್ತು ಧನದಾಸರಾದ ನರರು, ಬೇಸತ್ತು ತಮ್ಮ ಮಂಗಳವನ್ನು ಬಯಸಿ ಕೃತಯುಗದಲ್ಲೊಂದುದಿನ, ಬ್ರಹ್ಮನ ಮರೆಹೊಕ್ಕರು. ಆತನು '**ದ**'ವು ನಿಮ್ಮನ್ನು ರಕ್ಷಿಸುವುದು ಎಂದನು. ದೇವತೆಗಳು **ದಮ**ವೆಂದೂ ರಾಕ್ಷಸರು **ದಯೆ**ವೆಂದೂ ಮಾನವರು **ದಾನ**ವೆಂದೂ ದಕಾರಕ್ಕೆ ಅರ್ಥಕಲ್ಪಿಸಿಕೊಂಡು ಅವುಗಳನ್ನು ಆಚರಿಸಿ ಕೃತಕೃತ್ಯರಾದರು ಎಂದು ಬೃಹದಾರಣ್ಯಕದಲ್ಲಿ ಉಕ್ತವಾಗಿರುವುದು. ಆ ಕಾಲದಲ್ಲಿ ಏಕವರ್ಣ ಉಪದೇಶ ಸಾಕಾಗಿತ್ತು. ಮೇಲ್ಕಂಡ ತ್ರಿದೋಷಗಳೂ ಬೇರೆಯವೂ ನರರಲ್ಲೇ ಏಕತ್ರ ಕಲೆತು ದುರ್ನೀತಿಯು ಬಲಿಯುತ್ತಿರುವ ಈ ಕಾಲದಲ್ಲಿ ಎಷ್ಟು ನೀತಿಬೋಧೆಯಾದರೂ ಸಾಲದು.

ಧ್ವನಿಯನ್ನೂ, ಚಲನವನ್ನೂ ಸ್ಥಿರಗೊಳಿಸುವ ಯುಕ್ತಿಗಳನ್ನು ಕಂಡುಹಿಡಿದ ಎಡಿಸನ್ ಮಹಾಶಯನನ್ನು 'ಜನರ ಕಿವುಡನ್ನೇ ನಿರ್ಮೂಲ ಮಾಡಬಾರದೇಕೆ? ಎಂದು ಮಿತ್ರರೊಬ್ಬರು ಕೇಳಲು, ಶ್ರವಣಾರ್ಹವಾದ ವಚನಕ್ಕೇ ದುರ್ಭಿಕ್ಷವಿರುವಾಗ, ಅಂಥ ಸಾಧನಗಳಿಗಾಗಿ ತಾನು ಶ್ರಮಿಸಿ ಪ್ರಯೋಜನವಿಲ್ಲವೆಂದು ಉತ್ತರಕೊಟ್ಟನು. ಅಮೇರಿಕದಂಥ ನವನಾಗರಕ ದೇಶದಲ್ಲೇ ಒಳ್ಳೆಯಮಾತಿಗೆ ಅಭಾವವಾದರೆ, ಎಷ್ಟೋ ಹಿಂದೆಬಿದ್ದಿರುವ ನಮ್ಮ ಸೀಮೆಯ ಬಗ್ಗೆ ಹೇಳುವುದೇನಿದೆ? ಹಳ್ಳಿಗರ ಪಡೆಯಲ್ಲಿ ಕೋಪಕ್ಕೂ ಕೆಟ್ಟಮಾತು, ಮೆಚ್ಚುಗೆಗೂ ಕೆಟ್ಟಮಾತು! ಎಲ್ಲವೂ ಅಶ್ಲೀಲಮಯ! ಇದನ್ನು ತಕ್ಕಮಟ್ಟಿಗಾದರೂ ತಡೆಕಟ್ಟಲು, ಮನೆ ಬಳಿಕೆಯ ಮಾತಿನಲ್ಲಿ ಅಸಂಖ್ಯಾಕ ಸೂಕ್ತಿಗಳು ಅವಶ್ಯಕ.

ಮೈಸೂರು ಸೀಮೆಯಲ್ಲಿ ಚಿಕ್ಕದೇವರಾಜ ಒಡೆಯರ ಅಸ್ಥಾನ ಕವಯಿತ್ರಿ ಹೊನ್ನಮ್ಮನಿಂದೀಚೆಗೆ, ಕ್ರಮವಾಗಿ ಬಾಲಿಕಾ ಪಾಠಶಾಲೆಗಳು ಸ್ಥಾಪಿತವಾಗುವುದಕ್ಕೆ ಮುಂಚೆ, ಸ್ತ್ರೀಯರ ಶಿಕ್ಷಣಕ್ಕೆ ಅವಕಾಶ ತಪ್ಪಿ ಅವರ ಮೇಧಾಶಕ್ತಿಗೆ ಗ್ರಹಣಬಡಿದಂತೆ ಆಗಿತ್ತು. ಎರಡು ಪೀಳಿಗೆಗಳ ಹಿಂದಿನ ತಾಯಂದಿರು ಪ್ರಾಯಶಃ ತೀರಾ ಅನಕ್ಷರಸ್ಥರಾಗಿಬಿಟ್ಟರು. ಆದರೂ ಅಜ್ಜಿಗಳು ಹೇಳಿಕೊಡುತ್ತಿದ್ದ ಹಾಡುಗಳಿಂದ ಜ್ಞಾನವು ಬೆಳೆಯುತ್ತಲೇ ಇದ್ದಿತು. ಗಾದೆಗಳೂ ನೀತಿಗಳೂ ಕಂಠಗತವಾಗಿದ್ದವು. ಈಗಿನಂತೆ ಪುಸ್ತಕಕ್ಕೆ ಸೇರಿ ಸಕ್ಕರೆ ಅಂಗಡಿಗೆ ಹೋಗುತ್ತಿರಲಿಲ್ಲ. ರಕ್ತದೊಡನೆ ಕಲೆತು ಜನರ ನಡೆನುಡಿಗಳನ್ನು ಅಡಿಗಡಿಗೂ ತಿದ್ದುತ್ತಿದ್ದವು. ನಾರೀ ಮಣಿಯರು ಅನಕ್ಷರಸ್ಥರಾದರೂ ಸುಜ್ಞಾನಿಗಳಾಗಿದ್ದರು. ಇಂಥವರ ಗುಂಪಿಗೆ ಈ ಲೇಖಕನ ತಾಯಿಯವರೂ ಸೇರಿದ್ದರು. ಅವರು ಸದಾ ಹಾಡುಗಳನ್ನು ಹೇಳಿಕೊಳ್ಳುತ್ತಿದ್ದರು. ಅವುಗಳಲ್ಲಿ ಬೆಳಕಿತ್ತು. ಈಗಿನ ಕಾಲದ ಥಳಕಿರಲಿಲ್ಲ. ಆಗಾಗ್ಯೆ ಅವರ ಬಾಯಿಯಿಂದ ಅಮೋಘವಾದ ಸೂಕ್ತಿಗಳು ಹೊರಬೀಳುತ್ತಿದ್ದವು. ಅವುಗಳಲ್ಲಿ ಕೆಲವು ಲೇಖಕನ ಶಿರೋ ಗುಹೆಯಲ್ಲಿ ಅಡಗಿದವು. ಅವನ್ನು ಈಗ ಬೈಲಿಗೆ ಬಿಡಬೇಕೆಂಬ ಪ್ರಯತ್ನದ ಫಲವೇ ಈ ಸಣ್ಣ ಪುಸ್ತಕವು.

ಕನ್ನಡದಲ್ಲಿ ಸೋಮೇಶ್ವರಶತಕ ಮತ್ತು ಸರ್ವಜ್ಞಪದಗಳು ಖಂಡವಾಕ್ಯಗಳಾದರೂ, ಸರ್ವತ್ರ ಮನೋರಂಜಕವಾಗಿವೆಯಷ್ಟೆ! * ಸೋಮೇಶ್ವರನ ಕವನವು ಪ್ರೌಢವಾಗಿದೆ. ಹೆಮ್ಮರದ ಸತ್ವವು ಕಿರುಬೀಜ ದಲ್ಲಿ ಅಡಗುವಂತೆ ಮಹದ್ವಿಷಯಗಳು ಸರ್ವಜ್ಞನ ಸಣ್ಣಪದ್ಯದಲ್ಲಿ

---

* ನ್ಯೂಯಾರ್ಕ್ ನಗರದಲ್ಲಿ ಒಂದು ಸಂಸ್ಥೆ ಏರ್ಪಟ್ಟು ಅದರ ಸದಸ್ಯರು ಮಾತನಾಡುವಾಗ ಗಾದೆಗಳನ್ನೇ ಉಪಯೋಗಿಸಿಕೊಳ್ಳಬೇಕೆಂಬ ನಿಯಮವಂತೆ! ಕರ್ಣಾಟಕದಲ್ಲೂ ಇಂಥ ಸಮಿತಿ ಏರ್ಪಟ್ಟರೆ ಆ ಸದಸ್ಯರಿಗೆ ಸೋಮೇಶ್ವರ ಸರ್ವಜ್ಞ ಕವನಗಳು ಪಾರಾಯಣ ಪುಸ್ತಕಗಳಾಗುವುದರಲ್ಲಿ ಅಡ್ಡಿಯಿಲ್ಲ.

ಅಡಗಿವೆ. ಮಿತವೂ ಹಿತವೂ ಏಕತ್ರ ಕಲೆತು ಈ ಪದ್ಯಗಳು ಎಲ್ಲ ಜನರ ತುದಿನಾಲಗೆಯಲ್ಲಿಯೂ ನಲಿಯುತ್ತಿವೆ. ಈ ಪದಗಳು ಮೊದಲು ಹುಟ್ಟಿದವೋ ಗಾದೆಗಳು ಮೊದಲು ಹುಟ್ಟಿದವೋ ಎಂದು ಪ್ರಶ್ನಿಸುವಂತಿದೆ. ಆದುದರಿಂದ ಸರ್ವಜ್ಞನನ್ನೇ ಮಾದರಿಯಾಗಿ ತೆಗೆದುಕೊಂಡಿದೆ.

ರಾಮಸೇತುವೆಯ ಮಹತ್ಕಾರ್ಯದಲ್ಲಿ ಅಳಿಲೂ ಅಲ್ಪಸೇವೆ ಸಲ್ಲಿಸಿದಂತೆ ಸರ್ವಜ್ಞನ ಕೆಲಸವನ್ನು ಮುಂದುವರಿಸಬೇಕೆಂಬ ಆಶೆ.

> " ಸರ್ವಜ್ಞವಚನಗಳಲ್ಲಿ ನಿಂದೆಗಳು, ಪಾಷಂಡತನವು ಬಂಡನುಡಿಗಳು ಸೇರಿವೆ. ಇಲ್ಲ, ಹೊಲ್ಲ, ಸಾಕು, ಲೇಸು ಮುಂತಾದ ಪದಗಳ ಸರಪಣಿಯು ಬೇಸರಗೊಳಿಸುವುದು. ಅವನು ಪುರುಷಪಕ್ಷಪಾತಿಯು "

ಎನ್ನುವವರೂ ಉಂಟು. ಅಂಥವರು ಕೃತಕವನ್ನು ಕಂಡುಕೊಳ್ಳದವರೆನ್ನ ಬೇಕು. ಕೃತ್ರಿಮನಾಣ್ಯಕ್ಕೆ ಮುಲಾಮು ಮಾಡಿ ಮೋಸಗೊಳಿಸುತ್ತಿರುವ ಠಕ್ಕರಂತೆಯೇ ಇರುವ ಅಕ್ಕರಿಗರೂ ಉಂಟು. ಸ್ವಂತಕಲ್ಪನೆಗಳಿಗೆ "ಸರ್ವಜ್ಞ"ನ ಅಂಕಿತದ ಮೆರುಗುಕೊಟ್ಟು ಹರಡಿಬಿಟ್ಟಿರುವರು.

ಈ ಹಳಿಯುವಿಕೆಯಿಂದ ಈ ಲೇಖಕನಿಗೆ ಎಚ್ಚರಿಕೆ ದೊರೆತಿದೆ. ಈ ಗ್ರಂಥದಲ್ಲಿ ನಿಂದಾದಿಗಳನ್ನು ಬಿಡುವುದರ ಜತೆಗೆ ಭಾರತೀಯೇತರರಿಗೆ ಒಗ್ಗದಿರಬಹುದಾದ ಎಷ್ಟೋ ಸ್ವಾರಸ್ಯವಾದ ವಿಷಯಗಳನ್ನೂ ದೂರ ಮಾಡಿದೆ. ಸರ್ವಜ್ಞನು ಅಂದಿರುವದನ್ನೂ ಕೈಬಿಟ್ಟಿದೆ. ಆಮುಷ್ಮಿಕ ಜ್ಞಾನವು ಮೊಟಕಾಗಿರಲು, ಮೋಕ್ಷಗಾಮಿಗಳ ಪ್ರಥಮ ಕರ್ತವ್ಯವನ್ನು ಮಾತ್ರ ಸೂಚಿಸಿದೆ. ಐಹಿಕವು ಭೂಮಿಯಷ್ಟು ವಿಶಾಲವಾಗಿದೆ ಸುತ್ತಣ ಒಂದೊಂದು ದೃಶ್ಯವೂ ನಾನಾಜನರ ಬಗೆಬಗೆಯ ನಡೆನುಡಿಗಳೂ ಅನೇಕ ಪದ್ಯಗಳಿಗೆ ವಸ್ತುವಾಗಬಹುದು. ಆದರೆ ಜೀವನದ ಬಿಕ್ಕಟ್ಟಿನ ಈ ಕಾಲದಲ್ಲಿ ಜನರು ಆವಾವುದೋ ಕೆಲಸಗಳಲ್ಲಿ ತೊಡರಿಕೊಂಡಿರುವರು. ಓದಲು ಅವರಿಗೆ ವ್ಯವಧಾನವಿಲ್ಲ; ಕುತೂಹಲವೂ ಕಡಿಮೆ. ಆದುದರಿಂದ ಬರಹಕ್ಕೆ ಮಿತಿಯಿಲ್ಲದಿದ್ದರೆ ಗತಿಯಿಲ್ಲ.

ಸರ್ವಜ್ಞನು **ಉಪಮಾಲಂಕಾರ**ಪ್ರಿಯನು. ಈ ಗ್ರಂಥದಲ್ಲಿ ಅವನು ಕೊಟ್ಟ ಸಾಮ್ಯಗಳನ್ನು ಸಾಧ್ಯವಾದಷ್ಟು ಬಿಡಬೇಕೆನಿಸಿತು. ಆದುದರಿಂದ ಈ ಅಲಂಕಾರವು ಇಲ್ಲಿನ ಸುಮಾರು ನೂರು ಪದ್ಯಗಳಲ್ಲಿ ಮಾತ್ರ ಬಂದಿದೆ. ಶೀಲಪದ್ಧತಿಯಲ್ಲೂ, ವಿವಿಧಸೂಕ್ತಿಗಳಲ್ಲೂ, ಪರಸಾಧನಪ್ರಕರಣದಲ್ಲೂ ಇದು ಹೆಚ್ಚಾಗಿದೆ.

ಪ್ರಬೋಧನವೇ ಮುಖ್ಯವೆಂದು ಭಾವಿಸಿ ನಾಣ್ನುಡಿಗಿಂತ ಜಾಣ್ನುಡಿಗೆ ಹೆಚ್ಚು ಗಮನಕೊಟ್ಟಿದೆ.

ಪದ್ಯರಚನೆ.

ಅಂಕಿತಪದವಲ್ಲದೆ, ಒಂದು ಚತುರ್ಮಾತ್ರಾಗಣವು, ಎರಡು ತ್ರಿಮಾತ್ರಾಗಣಗಳೂ ಏಳು ಪಂಚಮಾತ್ರಾಗಣಗಳೂ ಪ್ರತಿ ಪದ್ಯದಲ್ಲೂ ಅಡಗಿವೆ. **ತ್ರಿ, ಚ** ಮತ್ತು **ಪ** ಗಳನ್ನು (ಅನುಕ್ರಮವಾಗಿ) ಈ ಗಣಗಳ ಸಂಕೇತವೆಂದು ಭಾವಿಸುವುದಾದರೆ, ಪ್ರಸಾರವು ಇಷ್ಟೆಯೆ—

ಪ, ಪ।
ಪ, ಪ॥
ಪ, ತ್ರಿ, ಚ, ಪ।
ತ್ರಿ, ಪ, ಅಂಕಿತ॥

ಕೆಲವು ಪದ್ಯಗಳಲ್ಲಿ ತ್ರಿಮಾತ್ರಾಗಣವು ತನ್ನ ಮುಂದಿನ ಅಥವಾ ಹಿಂದಿನ ಗಣದೊಡನೆ ಸ್ಥಳಪರಿವರ್ತನೆ ಮಾಡಿಕೊಳ್ಳುವುದು. ಗಣಗಳ ಅತಿಸಾಮ್ಯದಿಂದ ಹುಟ್ಟುವ ಬೇಸರವನ್ನು ತಪ್ಪಿಸಬೇಕೆಂದು ಗಣಪಲ್ಲಟಕ್ಕೆ ಸರ್ವಜ್ಞನೇ ಅವಕಾಶ ಕೊಟ್ಟನು. ಮಿತಿಗಾಗಿ ಪ್ರತ್ಯಯಲೋಪಗಳು ಅಥವಾ ಪ್ರಾಚೀನರೂಪಗಳು ವಿರಳತೆಗಾಗಿ ವಿಸಂಧಿಗಳೂ ಅಲ್ಲಲ್ಲಿ ಇವೆ. ಇವನ್ನು ದೋಷವೆಂದು ಭಾವಿಸುವವರು. 'ಸರ್ವಜ್ಞ ತೋಡಿಸಿದ ಹಳ್ಳಕ್ಕೆ ಕಿಂಚಿಜ್ಞನೂ ಬಿದ್ದಿರುವ'ನೆಂದು ಕನಿಕರಗೊಂಡು ಭಾಷಾಸೇವೆಯ ಸಲುವಾಗಿ ಎಲ್ಲ ತಪ್ಪುಗಳನ್ನೂ ತಿದ್ದಿಕೊಡಬೇಕಾಗಿ ವಿನಂತಿ.

ವಿಷಯಾನುಕ್ರಮಣಿಕೆ.

I ನಿತ್ಯಜೀವನಪ್ರಕರಣ

II ಪರಸಾಧನಪ್ರಕರಣ

೧೦. ಹಾನಿಪದ್ಧತಿ

೧೧ ನಿಷಿದ್ಧಪದ್ಧತಿ

೧೨ ಕರ್ತವ್ಯಪದ್ಧತಿ

III ಅನುಬಂಧಗಳು.

|| ಶ್ರೀಃ ||

ಸೂಕ್ತಿಸುಧೆ.

ಸರ್ವೇಶಪದಗಳು.

ವರವೀಯೆ ಕರನಾಲ್ಕು † ।
ಪರಿಹರಿಸೆ ವಿಘ್ನಗಳ ॥
ಕರಬೇರೆ † ಜಗವೆ ಪಿರಿಯೊಡಲಾಗಿರುವ ।
ವರಗಣಪ ಪೊರೆಗೆ ಸರ್ವೇಶ ॥೧॥

* * *

ಮೊದಲಲ್ಲೆ ಗುರು ಶುಕ್ರ ।
ವಿದುರ ಭೀಷ್ಮಾದಿಗಳು ॥
ಪದುಳವನು ನುಡಿಯಲದೇನು ? ನಡೆನುಡಿಯು ।
ಹದಗೊಳ್ಳಲಿಲ್ಲ ಸರ್ವೇಶ ॥೨॥

ವ್ಯಾಧಿಯಲಿ ನರಳುವುದು ।
ಹಾದಿಯನು ತೊರೆಯುವುದು ॥
ಆದಿಯಿಂ ಸಾಗಿವೆಯಾಗಿ, ನೀತಿಯಾ ।
ಬೋಧೆಯಿರಬೇಕು ಸರ್ವೇಶ ॥೩॥

---

† ಲಘು ಟಿಪ್ಪಣಿ ನೋಡಿ.

ಸುಗಮವಹ ನೀತಿಗಳು ।
ನಿಗಮಾಗಮೋಕ್ತಿಗಳು ॥
ಸುಗುಣಿಗಳ ಶೀಲ, ಮಗುವಿನ ಲೀಲೆಗಳು ।
ಜಗಕೆ ಮಿಗಿಲಕ್ಕು ಸರ್ವೇಶ ॥೪॥

ನಿದ್ದೆಯಿಂ ಲೋಕವನು ।
ಬದ್ಧಿಸಿಹ ತೆರದಲ್ಲಿ ॥
ಶುದ್ಧನಡತೆಯಿಂದ ಬಿಗಿದಿಡಬಾರದೇ ।
ಬುದ್ಧಿಹೀನರನು ಸರ್ವೇಶ ? ॥೫॥

೧. ದೇಶಪದ್ಧತಿ

ತರಿಯುತ್ತ ಮಹಿಷನನು ।
ಧೊರೆತನವ ಚಾಮುಂಡಿ ॥
ಇರಿಸಿದಳು ತನ್ನ ತವರ್ಮನೆಯವರ್ಗೆ ।
ಚಿರಮಾಳಲವರು ಸರ್ವೇಶ ॥೬॥

ಅರಸುತನ ಸಲ್ಲುವುದೆ ।
ಹರಿಯಂಶವಿಲ್ಲದಲೇ ? ॥
ಉರಿವುದೇ ಜ್ಯೋತಿ ಇರದಿರೆ ತೈಲಗಳು ? ।
ಧೊರೆಯು ಬರಿನರನೆ ? ಸರ್ವೇಶ ॥೭॥

ಭೂತಲವು ತಣ್ಣಗಿರೆ ।
ನೀತಿಯಿರೆ ಸಾಕೇನು ? ॥
ಪಾತಕಿಗೆ ಶಾಸನ ಭೀತಿ ಹುಟ್ಟಿಸುವ ।
ನಾಥನಿರಬೇಕು ಸರ್ವೇಶ ॥೮॥

* * *

ಮಹಿಮೆಯಾ ಸ್ಥಾನಕ್ಕೆ ।
ಮಹಾನವಮಿ ಹಬ್ಬಕ್ಕೆ ॥
ಮಹಾವೈಭವಕೆ ನಮ್ಮಾ ಮೈಸೂರು ।
ಮಹದಕ್ಕು ಮಹಿಗೆ ಸರ್ವೇಶ ॥೯॥

ಮುನ್ನಿನಾ ವೈಭವವ ।
ಸನ್ನುತ್ಯ ಸಂಸ್ಕೃತಿಯ ॥
ಉನ್ನತಧ್ಯೇಯಗಳನ್ನು ಪಾಲಿಪನು ।
ಕನ್ನಡಿಗ ನೃಪನು ಸರ್ವೇಶ ॥೧೦॥

ಹಿಂದಿನಾ ಸಂಸ್ಕೃತಿಯು ।
ಇಂದಿನಾ ನವಕಲೆಯು ॥
ಹೊಂದಿರಲು ಗಂಡಭೇರುಂಡವಪ್ಪುದು ।
ಅಂದದಾ ಕುರುಹು ಸರ್ವೇಶ ॥೧೧॥

ಕಾಲಗತಿಯಿಂ ಕಾಲು ।
ಪಾಲಾಗಲೇಂ ರಾಜ್ಯ ॥
ಮೇಲುಮೆಯ ಮೇಲು ಪಂಕ್ತಿಯು ಮೈಸೂರ ।
ಓಲಯಿಕು ಜಗವೆ ಸರ್ವೇಶ ॥೧೨॥

ಜಲಮುಖ್ಯ ಸೌಕರ್ಯ ।
ಮಲೆನಾಡ ಸೌಂದರ್ಯ ॥
ಮಲಯಜದ ಸೌರಭ ನಮ್ಮರಸರ ಭೂ ।
ವಲಯದಲಿ ಮಿಗಿಲು ಸರ್ವೇಶ ॥೧೩॥

ಸಲೆ ಕೃಷ್ಣರಾಜಾಬ್ಧಿ ।
ಶಿಲೆಯ ಕಲೆ ಬೇಲೂರು ॥
ಜಲಪಾತ ಶಿವನಸಮುದ್ರ, ಗೆರಸೊಪ್ಪೆ ।
ಇಳೆಗೆ ಒಪ್ಪಿಹವು ಸರ್ವೇಶ ॥೧೪॥

ದೀಪಗಳ ಅಂದಕ್ಕೆ ।
ಲೇಪಿಸುವ ಗಂಧಕ್ಕೆ ॥
ತಾಪಹರ ಮಿಸುನಿಗೆ ತವರುಮನೆಯೆ ಯದು- ।
ಭೂಪರೀನಾಡು ಸರ್ವೇಶ ॥೧೫॥

ಹತ್ತುತಲು ವಿದ್ಯುತ್ತು ।
ಸುತ್ತಲಿನ ಜನವು ಕೈ ॥
ಯೆತ್ತಿ ಮುಗಿಯುವುದು ಚಾಮುಂಡಾಂಬಿಕೆಗೆ ।
ನಿತ್ಯಸಂಧ್ಯೆಯಿದು ಸರ್ವೇಶ ॥೧೬॥

*　　*　　*

ಇಂದಿನಾ ಮೈಸೂರ ।
ಚಂದದಾ ಮೇಲುಮೆಗೆ ॥
ಸಂದಂಥ ರಂಗಪುರಿಯಾ ಹಿರಿಮಹಿಮೆ ।
ಹಿಂದೆ ಹದಿಯಾಯ್ತು ಸರ್ವೇಶ ॥೧೭॥

ಹದಿನೇಳನೆ ಶತಕದ ।
ಉದಯದಲಿ ರಾಜೊಡೆಯರ್ ॥
ಹದಿನೆಂಟರಸ್ತದೆ ಲಕ್ಷ್ಮಿ ತ್ರಂಬೆ ಕಾಯ್ದರು ।
ಯದುಕುಲವನಿಲ್ಲಿ ಸರ್ವೇಶ ॥೧೮॥

ಜನುಮವನು ಎನಗಿತ್ತ ।
ಜನಪದವ ಮುನ್ನಾಳ್ದ ॥
ಚನ್ನಾಗಿ ಬಾಳ್ವ ಸನ್ನುತ ರಂಗಪುರಿ ।
ಯನ್ನು ಉದ್ಧರಿಸೊ ಸರ್ವೇಶ ॥೧೯॥

(ಅನುಬಂಧನೋಡಿರಿ)

*　　　*　　　*

ಪದ್ಯವನು ಚಿಕದೇವ ।
ಗದ್ಯವನು ಕೃಷ್ಣನೃಪ ॥
ಹೃದ್ಯನಾಟಕವನು ಚಾಮಭೂಮಿಪರು ।
ಉದ್ಧರಿಸಿ ಇಹರು ಸರ್ವೇಶ ॥೨೦॥

ಮುನ್ನಾಳ್ದ ಭೂಮಿಪರ ।
ಚನ್ನೊಳಿಗಕ್ಕಿಂತ ॥
ಉನ್ನತಿಯು ನಾಲ್ವಡಿ ಕೃಷ್ಣನೃಪನಿಂದೆ ।
ಕನ್ನಡಕ್ಕಾಯ್ತು ಸರ್ವೇಶ ॥೨೧॥

*　　　*　　　*

ಬೇಲೂರ ಅಜಂತದ ।
ಮೇಲೆನಿಪ ಕಲೆಗಳಾ ॥
ಜಾಲಕ್ಕೆ ಕನ್ನಡಲಿಪಿಯ ಪಳಕವೇ ।
ಮೂಲ ತಾನಾಯ್ತು ಸರ್ವೇಶ ॥೨೨॥

ಫರಿಸಿಯರ್ದ ಇಂಗ್ಲೀಷು ।
ನೆರೆ ತಮಿಳು ಭಾಷೆಗಳ ॥
ಬರಹವಿರೆ ತುಸವೆ ಕನ್ನಡ ಇಮ್ಮಡಿಸಿ ।
ಕೊರಗಿಪುದು ಮಗುವ ಸರ್ವೇಶ ॥೨೩॥

ಚಕ್ಕುಲಿಯ ಹೋಲಲೇಂ? ।
ಅಕ್ಕರವು ಹಿತವಲ್ಲ ॥
ಮಕ್ಕಳಿಗೆ; ದುಃಖಗೊಳಿಸುವ ಬಳ್ಳಿಗಳು ।
ಚಿಕ್ಕವಾದಾವೆ? ಸರ್ವೇಶ ॥೨೪॥

ಬರಹವನು ಸರಿಪಡಿಸೆ ।
ಧರೆಯೆಲ್ಲ ಕಲಿತಾರು; ॥
ಹರಿದೀತು ಮಂಜು ಮಾಜುವ ಜವದಲ್ಲಿ ।
ನರರ ಅಜ್ಞಾನ ಸರ್ವೇಶ ॥೨೫॥

(ಅನುಬಂಧನೋಡಿರಿ)

* * *

ದೇಶವೇ ತುಂಡಾಯ್ತು ।
ಭಾಷೆಗೂ ಗಂಡಗಳು ॥
ಸಾಸಿರವು; ಮಮತೆ ಮಾಸಲು ಕನ್ನಡವೆ ।
ನಾಶವಾದೀತು ಸರ್ವೇಶ ॥೨೬॥

ಪದುಳವನು ಕೋರದಿಹೆ ।
ಹದಿನೆಂಟು ನಾಯಕರ ॥
ಪದದಡಿಗೆ ಸಿಲುಕಿ ಕನ್ನಡ ನುಡಿದಾಯಿ ।
ಹುದುಗಿಹಳು ಕೊರಗಿ ಸರ್ವೇಶ ॥೨೭॥

ಒಡೆತನದ ಪರಭಾಷೆ ।
ಎಡಬಲದ ಕಗ್ಗಗಳು ॥
ಇಡಿನಾಡ ಹಿಂದಿ ಬಡಿವವು ಕನ್ನಡಿಗ ।
ಬಡತಾಯ ಬಾಯ ಸರ್ವೇಶ ॥೨೮॥

ಇರುತಿರಲು ತಾಯ್ನಾಲು ।
ಕುರಿಹಾಲ ಬಯಿಪರೇಂ ? ॥
ತಿರುಳಿರಲು ತಾಯ ನುಡಿಯಲಿ, ಮಕ್ಕಳಿಗೆ ।
ತರವೆ ಪರಭಾಷೆ? ಸರ್ವೇಶ ॥೨೯॥

ಸಿರಿಗನ್ನಡಾಂಬೆಯನು ।
ಇರಿವರಾ ಮಾತಿಂಗೆ ॥
ಹಿರಿಹಿಗ್ಗುವಾತ ಕನ್ನಡಿಗನೆನಿಪನೆ? ।
ವರಪುತ್ರನಹನೆ ? ಸರ್ವೇಶ ॥೩೦॥

ಎಲ್ಲರೂ ಬಲ್ಲಂಥ ।
ಹುಲ್ಲಿನಂಥ ಸೊಲ್ಲನು ॥
ನಲ್ಗನ್ನಡ ನುಡಿಯಲನ್ನೆ ಕಿವಿಗೊಡಲು ।
ಒಲ್ಲದವರಾರು ? ಸರ್ವೇಶ ॥೩೧॥

ರನ್ನಾದಿ ಕವಿವರರು ।
ಮುನ್ನಾಳ್ದ ಪುಲಕೇಶಿ ॥
ಸನ್ನುತ್ಯ ಯತೀಶ ಶಿಲ್ಪಿಗಳಾಡಿದ ।
ಕನ್ನಡವ ಉಳಿಸೆ ಸರ್ವೇಶ ॥೩೨॥

೨. ಸೃಷ್ಟಿಪದ್ಧತಿ

ಜನನಿ ತಾ ಹಡದರೂ ।
ಜನಕ ತಾ ಪೊರೆದರೂ ॥
ಜನಿಸಿದಾ ಶಿಶುವಿಗೆ ಜೀವವೀವರೇಂ? ।
ಧನಿಯು ನೀನಿರುವೆ ಸರ್ವೇಶ ॥೩೩॥

ಜೋಡಿ ಅಳ್ಗಳು ಕೂಡಿ ।
ಮಾಡೆ ದೇಹಗೇಹವ; ॥
ಆಡಳಿತಗೈವನದರೊಳು ನಿನ್ನವನು ।
ಹೂಡಿ ಅಂಗಡಿಯ ಸರ್ವೇಶ ॥೩೪॥

ಜೀವಮಯವೀ ಜಗವು ।
ತೀವಿಹುದು ಜೀವಾಣು ॥
ಆವಾವ ವಸ್ತುವಿನಲ್ಲು, ಗಾಳಿಯಲು ।
ನಾವರಿಯದಂತೆ ಸರ್ವೇಶ ॥೩೫॥

ಸುರುಗಿಯನು ತೋರಿಸಲು ।
ತರತರಿಪ ತರುವುಂಟು ॥
ವರುಷ ನೂರಾರು ಮಿಾರಿಯು ಮೊಳೆಯುವಾ ।
ಕಿರಿಬೀಜವುಂಟು ; ಸರ್ವೇಶ ॥೩೬॥

ತಗಲಿದಾ ಮಾತ್ರಕ್ಕೆ ।
ಮಿಗಿಲುರಿಪ ಸೊಪ್ಪುಂಟು ॥
ದಿಗಲಿಂದ ಮುದರಿಕೊಳ್ಳುವ ಸೊಪ್ಪುಂಟು ।
ಜಗದೊಳಿದು ಚೋದ್ಯ ಸರ್ವೇಶ ॥೩೭॥

ಕಾಡಿನಾ ಗಿಡಗಳಲಿ ।
ಬಾಡುಂಬ ಹೂವುಂಟು ॥
ನೀಡುತ್ತ ಕುಡಿಯ ದೂರದ ಜಲವನ್ನು ।
ಈಂಟುವವು ಉಂಟು ಸರ್ವೇಶ ॥೩೮॥

* * *

ಅನಲಸಖ, ಸಲಿಲಕರ (Oxygen, Hydrogen)
ವೆನುವೆರಡು ಅನಿಲಗಳು ||
ಹೆಣೆಗೊಂಡು ಜೀವಪೋಷಕ ಜಲವಾಗಿ |
ಅನುವಾಯ್ತು ಜಗಕೆ ಸರ್ವೇಶ ||೩೯||

ಆದಿತ್ಯ ಮೊದಲಾದ |
ಆದಿತೇಯರ ಕೃತಿಯ ||
ಆದಿಶಕ್ತ್ಯಂಶ ವೆನುವೊಲು ವಿದ್ಯುತ್ತು |
ಸಾಧಿಪುದು ಜಗದಿ ಸರ್ವೇಶ ||೪೦||

*　　　*　　　*

ತನಿದನದ ಹಿಂದಕ್ಕೆ |
ವನಗಜದ ಮುಂದಕ್ಕೆ |
ಇನಿವಾಲ ಕುಡಿಯೆ ಕರುಮರಿ ಸಾರುವವು |
ಜನಿಸಿದಾಕ್ಷಣವೆ! ಸರ್ವೇಶ ||೪೧||

ಜೊಲ್ಲಿಂದ ನೂಲ್ಮಾಡಿ |
ಬಲವಾದ ಮನೆಗೈದು ||
ನೆಲೆಸುವಾ ಕ್ರಿಮಿಯು ಕೀಟದ ರೂಪನ್ನು |
ತಳೆಯುವುದು ಚೋದ್ಯ! ಸರ್ವೇಶ ||೪೨||

ಆರಾರು ಗೋಡೆಗಳ |
ನೇರಾದ ಮನೆಮಾಡಿ ||
ನೂರಾರು ಹೂವಲಿ ಹುಳುವು ಹಾರಾಡಿ |
ಸೇರಿಪುದು ಮಧುವ ಸರ್ವೇಶ ||೪೩||

ಮಣ್ಣೆಲಸ, ನೇಯುವಿಕೆ, ।
ಹೆಣೆಯುವಿಕೆ ಎಲ್ಲವನು ॥
ಕಣಜಗಳು ಜೇಡ ಗೀಜಗ ಕಲಿಸಿದವು ; ।
ಜಗಕೆ ಗುರುಗಳಿವು ಸರ್ವೇಶ ॥೪೪॥

* * *

ಕಣ್ಣಿಂಗೆ ಮುದವೀವ ।
ಬಣ್ಣಗರಿಗಳ ಸೊಂಪ ॥
ಸಣ್ಣಗಿಹ ನವಿಲ ತತ್ತಿಯ ರಸದಲ್ಲಿ ।
ಹಣ್ಣಿಹನು ಬೊಮ್ಮ ಸರ್ವೇಶ ॥೪೫॥

ತಂಟೆಗಳು ಇರದಿರಲು ।
ಗಂಟೆಯಲೆ ವೈಲಿಗಳು ॥
ಎಂಟ್ನೂರ ಹಾರಿ ಚಲಿಸುವ ಕೀಟಗಳು ।
ಉಂಟು ಜಗದೊಳಗೆ ಸರ್ವೇಶ ॥೪೬॥

ಕಣ್ಣು ಮೂಗಿಗರಲಿಂ ।
ಕಣ್ಣುಬಾಯ್ಗೆ ಫಲದಿಂ ॥
ಕಣ್ಕಿವಿಗೆ ರಂಗು ರಾಗದ ಹಕ್ಕಿಯಿಂ ।
ಹಣ್ಣಿಹನು ಹಿತವ ಸರ್ವೇಶ ॥೪೭॥

ಘನವಾದ ಭಗಣವನು ।
ದಿನವೆಲ್ಲ ಬೆಳಗುವಾ ॥
ಇನನನ್ನು ಸಕಲಸುಖಕರ ವಸ್ತುವನು ।
ಅನುಗೈದ ನೆಮಗೆ ಸರ್ವೇಶ ॥೪೮॥

ಪುನಗು ಕಸ್ತುರಿಗಳ ।
ವನಮೃಗಕೆ ಕೊಟ್ಟಿದ್ದು ॥
ಮನುಜಂಗೆ ಕೊಡದಿರಲೇನು ? ಸೆರೆಕೊಲೆಯು ।
ಜನಕೆ ತಪ್ಪಿಹುದು ಸರ್ವೇಶ ॥೪೯॥

ಸೋಜಿಗದ ಜಗಕೆಲ್ಲ ।
ಯೋಜಕನೆ ನೀನಿರಲು ॥
ಬೀಜವೃಕ್ಷ ನ್ಯಾಯದಾ ಗೋಜಿನಾ ।
ರೇಜಿಗೆಯೆ ಬೇಡ ಸರ್ವೇಶ ॥೫೦॥

* * *

ಬಿಡುವುಂಟು ಅನುಜರಿಗೆ ।
ಒಡಹುಟ್ಟು ಅವರಲ್ಲ ॥
ಒಡನೆಯೇ ಹುಟ್ಟಿತು ಮೃತ್ಯು ದಿಟವಾಗಿ ।
ಬಿಡದಿರೆಚ್ಚರವ ಸರ್ವೇಶ ॥೫೧॥

ಉಳಿಯೆವೆಂಬುವುದನ್ನು ।
ತಿಳಿದಿದ್ದು ಅಳಿಯುವಾ ॥
ಸ್ಥಳಕಾಲ ಮೂಲದ ನೆಲೆಯ ಸುಳಿವನ್ನು ।
ತಿಳಿದೀತೆ ಜಗವು ? ಸರ್ವೇಶ ॥೫೨॥

ಸಾವಿಲ್ಲದಲೆಯಿಲ್ಲ ।
ಯಾವಾಗ ಸಾಯಲೇಂ ॥
ನೋವಾಗಿ ಕೊರಗಿ ಕರಗುವ ಮುನ್ನಲೇ ।
ಸಾವುದೇ ಲೇಸು ಸರ್ವೇಶ ॥೫೩॥

ಅಳಿವುದಕೆ ಹೆದರುವಗೆ |
ಉಳಿವುದಕೆ ಹಕ್ಕಿಲ್ಲ ||
ಗಳಿತವಹ ದೇಹವು ಚಿರಂಜೀವಿಯಾ |
ಹಳಿಯಂಗಿ ತಿಳಿಯೆ ಸರ್ವೇಶ ||೫೪||

ಹಣ್ಣಾಗೆ ಈಕಾಯ |
ಮಣ್ಣಾಗೂಡುವ ನೆಲವ ||
ಚನ್ನಾಗಿ ಹುಡುಕಲು ಪಾಪ ಭಾರದಲಿ |
ಮುನ್ನ ಬಾಗುವುದು ಸರ್ವೇಶ ||೫೫||

೩. ಆರೋಗ್ಯಪದ್ಧತಿ

ದೇಹವಿದು ನಾರುವುದು |
ಆಹಾರಭೇದದಿಂ ||
"ದೇಹಶುದ್ಧಿ ದೈವಸಿದ್ಧಿ" ಯೆಂದಿರಲು |
ದೇಹಶುಚಿ ಬೇಕು ಸರ್ವೇಶ ||೫೬||

ನಿಚ್ಚಳದ ದೇಹದಿಂ |
ಸ್ವಚ್ಛಮನ, ಸುಮನದಿಂ ||
ನಿಶ್ಚಯಜ್ಞಾನ, ಜ್ಞಾನದೇಳ್ಗೆಯಿಂ |
ಉಚ್ಚಪದವಕ್ಕು ಸರ್ವೇಶ ||೫೭||

*   *   *

ಬೇಡದಿರೆ ಉಣಿಸದಿರು |
ನೋಡದಲೆ ಕುಡಿಸದಿರು ||
ಬಾಡಿದಾ ಕಾಯಿಪಲ್ಯವ ತಿನಸದಿರು |
ಬೀಡಿ ಹಿಡಿಸದಿರು ಸರ್ವೇಶ ||೫೮||

ಒಡಲಿಲ್ಲ ಊಟಕೆನೆ ।
ಹಿಡಿಸಾಕು ತನುಸಾಕೆ; ॥
ಗಿಡಿಗಿಡಿದು ತಿಂದು ಬಡವರ ಬಾಯ್ಗೇಕೆ ।
ಹುಡಿಯ ಹುಯ್ಯುವರು? ಸರ್ವೇಶ ॥೫೯॥

ನಾಲಗೆಯ ಕಟ್ಟುವನು ।
ಕಾಲನನೆ ಅಟ್ಟುವನು ॥
ನಾಲಗೆಗೆ ಸೋತು ತಿನುವನು ತನ್ನ ಕೊನೆ ।
ಗಾಲ ಬಯಸುವನು ಸರ್ವೇಶ ॥೬೦॥

ಸಾವುದನು ಮರೆತೇವು ।
ಮೇವುದನು ಮರೆದಿರೆವು ॥
ಮೇವಿನಲೆ ಜೀವಿಯ ನೋವು ಸಾವುಗಳು ।
ತೀವಿಹವು ನೋಡೆ ಸರ್ವೇಶ ॥೬೧॥

* * *

ಕೊಟ್ಟಣದ ಅಕ್ಕಿಯನು ।
ಬಿಟ್ಟು ಯಂತ್ರದಕ್ಕಿಯ ॥
ಹೊಟ್ಟೆಗಡಚುತ್ತ ನಲಿದರೆ ಕಾಯವೇ ।
ಕೆಟ್ಟು ನಲಗೀತು ಸರ್ವೇಶ ॥೬೨॥

ಬಿಳುಪಾದ ಸಕ್ಕರೆಯು ।
ಹುಳಿಯಾದ ಕೊಳೆಬೆಲ್ಲ ॥
ಅಳಿಸುವುವು ಅಸುವ, ಕಬ್ಬಿನ ಹೊಸರಸವು ।
ಉಳಿಸುವುದು ಜನರ ಸರ್ವೇಶ ॥೬೩॥

ಹಲ್ಲುಗಳ ನೆರೆಯಲ್ಲಿ ।
ಜೊಲ್ಲುತಾ ಬೆರೆವಲ್ಲಿ ॥
ಎಲ್ಲವೂ ರುಚಿಯು; ಹಿತವನು ಸಾಧಿಸಲು ।
ಮೆಲ್ಲುವುದು ಮೆಲ್ಗೆ ಸರ್ವೇಶ ॥೬೪॥

*　　　*　　　*

ಪಿತ್ತಕ್ಕೆ ದೊಡ್ಡೆಲೆಯು ।
ಶೀತಕ್ಕೆ ನುಗ್ಗೆಲೆಯು ॥
ವಾತಕ್ಕೆ ನಾರಾಯಣಿಯು ಮದ್ದಾಗೆ ।
ಭೀತಿ ಬೇಕಿಲ್ಲ ಸರ್ವೇಶ ॥೬೫॥

ರಾಗಿಯಿರೆ ಬಹುಮೂತ್ರ ।
ರೋಗಿಲ್ಲ; ಕ್ಷಯಿಪರಿಗೆ ॥
ರಾಗಿಯಾ ಗಂಜಿ ಸಂಜೀವನವಕ್ಕು ।
ರಾಗಿ ರಾಜನೆಲೆ ಸರ್ವೇಶ ॥೬೬॥

ಸೊಪ್ಪು ಬೇರುಗಳಲ್ಲಿ ।
ಉಪ್ಪಿನಲಿ ನೀರಲ್ಲಿ ।
ತೆಪ್ಪಗಿಹ ಮನದಲಿ, ತಡೆವ ಗುಣವುಂಟು ।
ಮುಪ್ಪು ಮರಣಗಳ ಸರ್ವೇಶ ॥೬೭॥

*　　　*　　　*

ದೇಹದಾ ಯಂತ್ರಕ್ಕೆ ।
ಮೋಹಕಜ್ಞಾತಿಯೊಲು ॥
ಲೋಹಯಂತ್ರವಿದೆ; ದುಡಿಸದೆ ಕೆಡಿಸುವುದು ।
ದೇಹವನೆ ಬೇಗ ಸರ್ವೇಶ ॥೬೮॥

ಚೋಟುದ್ದ ಪಯಣಕ್ಕೆ ।
ಮೋಟಾರ ಹತ್ತುತಿರೆ ॥
ಮೋಟಕ್ಕು ಕಾಲು, ಬಾತಿನ ರೆಕ್ಕೆಗಳ ।
ಧಾಟಿ ಕೆಟ್ಟಂತೆ ಸರ್ವೇಶ ॥೬೯॥

ಕೆಡಹುವುದು ಬೆವರನ್ನು ।
ತಡೆಯುವದು ವೀರ್ಯವನು, ।
ಬಿಡದಿಹುದು ಸರಳತೆಯನ್ನು ಇವು ಬೇಕು ।
ಒಡಲ ಸೌಖ್ಯಕ್ಕೆ ಸರ್ವೇಶ ॥೭೦॥

ಏಳೆಂಟು ತಾಸಾಗೆ ।
ಏಳದವ ಜಡನಾಗಿ ।
ಹಾಳಹನು; ಕೋಳಿಕೂಗಲು ಏಳುವವ ।
ಗೂಳಿಯಂತಹನು ಸರ್ವೇಶ ॥೭೧॥

*　　　　*　　　　*

ಬಸೆ ಬೆವರ ಕೂಡಿಡುವ ।
ಹಸುಗೆ ತೆರದುಡುಪಲ್ಲ ॥
ಬಿಸಲಿನಾ ನಾಡಿಗೆ; ಗಾಳಿಯಾಡುವಾ ।
ವಸನ ಉಡಬೇಕು ಸರ್ವೇಶ ॥೭೨॥

ಮೋದದಿಂ ಚೀನಾಂಬ ।
ರಾದಿಗಳ ಉಡುತಿರಲು ॥
ಬೂದಿಯನು ಒಡಲಿಗೆ ಬಳಿಸಿ ಕಳಸುವುವು ।
ಖಾದಿ ಕಾದೀತು ಸರ್ವೇಶ ॥೭೩॥

ಬುಟ್ಟಿಹುಳು ಸಾಯಿಸುತ ।
ಬೆಟ್ಟುದ್ದ ನೇಯಿಸಿದ ॥
ಪಟ್ಟೆಯನು ಅಹಿಂಸಾವ್ರತಿ ಉಟ್ಟಾನೆ ? ।
ಕೆಟ್ಟಕೊಲೆ ಮಡಿಯೆ ? ಸರ್ವೇಶ ॥೨೪॥

*   *   *

ಎಳನೀರ, ಪಾನಕವ, ।
ತಿಳಿಯಾದ ಮಜ್ಜಿಗೆಯ, ॥
ಫಲರಸವ ಕುಡಿದು ಬಾಳದೆ, ಮದ್ಯಗಳ ।
ಕೊಳೆಗೆ ಎಳಸುವರೆ ? ಸರ್ವೇಶ ॥೨೫॥

ಗಬ್ಬುಗಳ್ ಕುಡಿವವನು ।
ಒಬ್ಬನಾಗಿರಲೇನು ? ॥
ಒಬ್ಬೊಬ್ಬ ಬಂಧುಗಳನ್ನು ಗತಿಗೆಡಿಸಿ ।
ತಬ್ಬಲಿಯ ಗೈವ ಸರ್ವೇಶ ॥೨೬॥

ಒಕ್ಕೊಳಗ ಹಾಲಿನಾ ।
ರೊಕ್ಕವನು ಮದ್ಯದಾ ॥
ಒಕ್ಕುಡಿತೆಗಿತ್ತು ಹೆಂಡರು ಮಕ್ಕಳನು ।
ದಿಕ್ಕೆಡಿಪ ಮೂಢ ಸರ್ವೇಶ ॥೨೭॥

ದುರಭ್ಯಾಸ, ದುರ್ವ್ಯಯ, ।
ದಾರಿದ್ರ್ಯ, ದುಷ್ಕಾರ್ಯ, ॥
ದುರುಳತನ, ದುರಿತ, ದುರ್ಗತಿ ಸರಪಣಿಯ ।
ತೆರದಲ್ಲಿ ಬಹವು ಸರ್ವೇಶ ॥೨೮॥

೪. ಜ್ಞಾನಪದ್ಧತಿ

ತಿನುವುದನು ಬಿಡುವುದನು ।
ಮನಗಾಣೆ, ಚೀಪುತ್ರ ॥
ತಿಣುಕುವುದು ಶಿಶುವು ; ಅರಿವಿಗೆ ಮೊದಲಿದ್ದು ।
ಕೊನೆಯಿಲ್ಲ ಜಗದಿ ಸರ್ವೇಶ ॥೭೯॥

ಕುಲವಿದ್ಯೆ ಸಲಹುವುದು ।
ಹಲವೋದು ಹೊಲಸಕ್ಕು ॥
ಒಲುಮೆಯಲಿ ತಾಯಿ ಕಾಯಲು, ಮಲತಾಯಿ ।
ಕೊಲುತಿಹಳು ಮಗುವ ಸರ್ವೇಶ ॥೮೦॥

ಓದನದ ಸುಖಕಾಗಿ ।
ಓದುವುದು ಸರಿಯಲ್ಲ ॥
ಓದನವೆ ಗುರಿಯೇನಲ್ಲ ; ಪರಮಶಿವ- ।
ಮೋಹವೇ ಗುರಿಯು ಸರ್ವೇಶ ॥೮೧॥

ಅರಿತಾತ ಆಳಕ್ಕು ।
ದುರುಳರಿಗೆ ಹಲವಿಧದೆ ॥
ಅರಿಯೆ ನಾ ನೆನುವುದು ಲೇಸು ; ಅರಿಯಕ್ಕು !
ಅರಿವು ಸಲ್ಲದಲಿ ಸರ್ವೇಶ ॥೮೨॥

ಹಲವಿಧದ ರಸಸಾರ ।
ನೆಲದಿಂದ ಬರುವಂತೆ ॥
ಬಲುಹಿನಾ ಭಾವಗಳೆಲ್ಲ ಹರಿಯುವವು ।
ತಲೆಯಿಂದ ಸತತ ಸರ್ವೇಶ ॥೮೩॥

ಹುರುಳಿದ್ದು ಫಲವೇನು? ।
ಹೊರ ಹೊಲಸು ಶಿರಕೇರೆ ॥
ಮರುಳಹೆವು ; ಒಳಗೆಯೆ ಕಾಯಿ ಕರಗದೇಂ ।
ಕರಟ ಬಿರುಸಿದ್ದು? ಸರ್ವೇಶ ॥೮೪॥

* * *

ಹಣವೆಣಿಸೆ, ಪಂಚಾಂಗ ।
ಗುಣಿಸೆ, ರಾಶಿಯನಳೆಯೆ, ॥
ದಿನಚರಿಯ ಸಾಗಿಸೆ ಗಣಿತ ವಿರಬೇಕು. ।
ಗುಣವೆ ಬರಿಯೋದು? ಸರ್ವೇಶ ॥೮೫॥

ಎಷ್ಟಂಕಿ ಬೆಳಸುವೆವೊ ।
ಅಷ್ಟೆಯೇ ವಿಲೋಮದಿ ॥
ಒಟ್ಟಾಗಿ ಕಲೆಯೆ ಮುಂದಿನ ದೊಡ್ಡಂಕಿ* ।
ಹುಟ್ಟೆ ಹಬ್ಬುವುದು ಸರ್ವೇಶ॥ ೮೬॥

---

* ವಿಲೋಮದಿ=ಎಡಗೈಕಡೆಗೆ, ಉರ್ದು ಬರಿವಂತೆ.

12345	123456	1234567
54321	654321	7654321
66666	777777	8888888

12345678	1, 2. 3, 4, 5, 6, 7, 8, 9,
87654321	9, 8, 7, 6, 5, 4, 3, 2, 1,
99999999	10,10,10,10,10,10,10,10,10,

ಮಗ್ಗಿಯ ಸೂಕ್ಷ್ಮರೂಪವು.

ಒಟ್ಟುಸಾಲಡಿಯದನೆ ।
ಇಟ್ಟು ಕಳೆವಾಗ, ಬಲ- ॥
ಕೆಪ್ಪು ಸರಿಸಲಷ್ಟು ಶೇಷ ಹೆಚ್ಚುತ್ತ* ।
ಬಿಟ್ಟುಕೊಳುವುದು ಸರ್ವೇಶ ||೮೭||

ತುಂಬುಸಾಲಂಕಿಯನು ।
ಕುಂಭಿನಿಯ ಕಡೆಗೊಮ್ಮೆ
ಅಂಬರದೆಡೆಗೊಮ್ಮೆ ಬರೆಯೆ, ಅದಪ್ಪುದು ।
ಒಂಭತ್ತು ಮಗ್ಗಿ† ಸರ್ವೇಶ ||೮೮||

---

* (1)
1 2 3 4 5 6 7 8 9, 10,
0 1 2 3 4 5 6 7 8, 0,
1 1 1 1 1 1 1 1 1 1

(2)
2 3 4 5 6 7 8 9, 10, 11,
0 1 2 3 4 5 6 7, 8, 9
2 2 2 2 2 2 2 2 2 2

(3)
3 4 5 6 7 8 9, 10, 11, 12,
0 1 2 3 4 5 6 7 8 9
3 3 3 3 3 3 3, 3, 3, 3

(4)
4 5 6 7 8 9, 10, 11, 12, 13,
0 1 2 3 4 5 6 7 8 9
4 4 4 4 4 4 4, 4, 4, 4

(5)
5 6 7 8 9, 10, 11, 12, 13, 14,
0 1 2 3 4, 5, 6, 7, 8, 9
5 5 5 5 ಇತ್ಯಾದಿ.

† 9 ನೆಯ ಮಗ್ಗಿ
0 9
1 8
2 7
3 6
4 5
5 4
6 3
7 2
8 1
9 0

ಮಗ್ಗಿಯ ಸೂಕ್ಷ್ಮರೂಪ

ತುಂಬುಸಾಲಂಕಿಯನು ।
ಒಂಭತ್ತರಿಂ ಗುಣಿಸೆ ॥
ಹೊಂಬುವುದು ಒಂದು; ವಿಲೋಮಗುಣ್ಯದಿಂ * ।
ತುಂಬ ಎಂಟುಗಳೇ ಸರ್ವೇಶ ॥೮೯॥

ಸರಿಯೆಡೆಯ ಅಂಕಿಗಳು ।
ನೆರೆಕಲೆತು ಮಿಕ್ಕವಕೆ ॥
ಸರಿದೂಗೆ-ಹನ್ನೊಂದುಳಿಯೆ-ಹನ್ನೊಂದೆ ।
ತರಿವುದೆಲ್ಲವನು ಸರ್ವೇಶ ॥೯೦॥

ಉರುಳ್ಗಾಲಿಯ ಅಂಚು ।
ಇರಚಿಗಳ ಅಂತರದ ॥
ಪರಿಮಿತದ ಆರೂಕಾಲರಷ್ಟುಹುದು ।
ಹೊರಕಟ್ಟಿನಳತೆ† ಸರ್ವೇಶ ॥೯೧॥

ಭಗಣವನು ಎಣಿಸೇವೆ § ।
ಗಗನವನು ಅಳೆದೇವೆ ॥
ಹೊಗೆಯನ್ನು ಸೌದೆಗೈವೆವೆ? ಹೆಚ್ಚಿಲ್ಲ ।
ಜಗದ ವಿಜ್ಞಾನ ಸರ್ವೇಶ ॥೯೨॥

ಅನುಲೋಮ	* ವಿಲೋಮ
1 2 3 4 5 6 7 8 9 × 9	9 8 7 6 5 4 3 2 1 × 9
1 1 1 1 1 1 1 1 0 1	8 8 8 8 8 8 8 8 8 9

† 6.28 × ಇರಚಿಯವರಿಗಿನ ಎತ್ತರ.

§ ದಿನಕ್ಕೊಂದರಂತೆ ನಮ್ಮ ನೆತ್ತಿಯ ಮೇಲೆ ಕಾಣಿಸಿಕೊಳ್ಳುವ ಇಪ್ಪತ್ತೇಳು ನಕ್ಷತ್ರಗಳನ್ನು ಮಾತ್ರ ಕುರಿಯುವೆವು.

ವರುಷವೂ ರವಿಯನ್ನು ।
ಬರುದಿನವೆ ತನ್ನನ್ನು ॥
ಧರೆಬಳಸಿ ಹರಿವುದು; ಇಂತು ನಿಜಕಾರ್ಯ ।
ಸರಲತರಮಲ್ತೆ ಸರ್ವೇಶ ॥೯೩॥

ವರುಷದಲಿ* ರವಿಯನ್ನು ।
ಧರೆಬಳಸೆ, ಶಶಿಬಿಂಬ ॥
ಧರೆಯನ್ನೆ ಮಾಸದಿ† ಸುತ್ತಿ ಹರಿಯುವುದು ।
ಸ್ಥಿರವೆ ಗೋಳಗಳು? ಸರ್ವೇಶ ॥೯೪॥

ಮುವ್ವತ್ತು ಮತ್ತೆರಡು ।
ದಿವ್ಯಸೌರಾಯನದೆ, ॥
ಮುವ್ವತ್ತಮೂರು ಸುಚಾಂದ್ರ ಆಯನಗಳು ।
ಅವ್ವಳಿಸಿ ಬಹವು ಸರ್ವೇಶ ॥೯೫॥

ಸೂರ್ಯನಿಂ ಭೂಗೋಳ ।
ಸಾರುವುದು ಬಹುದೂರ ॥
ಆರು ಹನ್ನೆರಡು ತಿಂಗಳ ಮೂರನೆಯ § ।
ವಾರಾಂತ್ಯದಲ್ಲಿ ಸರ್ವೇಶ ॥೯೬॥

ಸೂರ್ಯನಿಗೆ ಹತ್ತಿರವೆ ।
ಸಾರುವುದು ಭೂಗ್ರಹವು ॥
ಮೂರು ಒಂಭತ್ತು ತಿಂಗಳ ಮೂರನೆಯ ‡ ।
ವಾರಾಂತ್ಯದಲ್ಲಿ ಸರ್ವೇಶ ॥೯೭॥

---

* 365 ದಿ. 6 ಘಂ. 9 ನಿ. † 27 ದಿ. 8 ಘಂ.

§ 21 ನೆ ಜೂನ್ (ಕಟಕ ಸಂ.) ಮತ್ತು 21ನೇ ಡಿಶಂಬರ್ (ಮಕರ ಸಂ.)

‡ 21 ನೆ ಮಾರ್ಚಿ (ಮೇಷ ಸಂ.), 23 ನೆ ಸೆಪ್ಟಂಬರ್ (ತುಲಾ ಸಂ.)

ಇನಮಾನ ಶಶಿಮಾನ।
ದನುಮಾನ ಪಡಬೇಡ; ॥
ಜನವರಿಯ ನಡುವೆ † ಜನಿಪಳು ಸಂಕ್ರಾಂತಿ ।
ಎನುತರಿಯೆ ಸಾಕು ಸರ್ವೇಶ ॥೯೮॥

ಎ. ನ. ಸೆ. ಯಿಂ ಜನಿಪವಕೆ ‡ ।
ಜುನ್ಗೆ ದಿನ ಮುವ್ವತ್ತು ; ॥
ದಿನವೆರಡು ಕಮ್ಮಿ ಫೆಬ್ರುಕೆ; ಮಿಕ್ಕವಕೆ ।
ದಿನವೊಂದು ಹೆಚ್ಚು ಸರ್ವೇಶ ॥೯೯॥

ಒಪ್ಪುವಾಕ್ರಿಸ್ತಕದಿ ।
ಎಪ್ಪತ್ತು ಎಂಟನ್ನು § ॥
ತಪ್ಪದಲೆ ಕಳೆಯೆ ಶಾಲಿವಾಹನವೆ ।
ನಿಪ್ಪ ಶಕವಕ್ಕು ಸರ್ವೇಶ ॥೧೦೦॥

ಹಳೆಯ ಮುವ್ವತ್ತೊಂದು ।
ಕಳಕೊಂಡ ಶತಕವನು * ॥
ಬಳಕೆಯಾ ಕ್ರೈಸ್ತ ಇಸವಿಗೆ ಸೇರಿಸಲು ।
ಕಲಿಯ ಶಕವಕ್ಕು ಸರ್ವೇಶ ॥೧೦೧॥

* * *

---

† 13 ಅಥವಾ 14 ನೆ ಜನವರಿ, ‡ ಎ=ಏಪ್ರಿಲ್, ನ=ನವೆಂಬರ್, ಸೆ=ಸೆಪ್ಟಂಬರ್—30 ದಿನಗಳು.

§ ಕ್ರಿ. ಶ. 1938—78=1860 ಶಾ. ಶ

* 3100+1938 (ಕ್ರಿ. ಶ.)=5038 ಕಲಿಶಕ.

ವರುಷಗಳು ಹದಿನೆಂಟು ।
ಬರಿದಿವಸ ಹನ್ನೊಂದು † ॥
ಉರಳಿದರೆ ಒಂದೊಂದು ಬಗೆ ಗ್ರಹಣವೂ ।
ಮರಳುವುದು ಬಿಡದೆ ಸರ್ವೇಶ ॥೧೦೨॥

ಗಡುವಿರಲು ಇಷ್ಟೆಯೇ ।
ಬಡಶಶಿಗೆ ಮೂವ್ವತ್ತು ॥
ದೃಢರವಿಗೆ ನಲವತ್ತೆರಡು ಗ್ರಹಣಗಳು ।
ಬಡಿವುವೆಲ್ಲೆಲ್ಲೊ ಸರ್ವೇಶ ॥೧೦೩॥

*   *   *

ನಡುಹಗಲು ಶುಭಕರವು ।
ಬಿಡಲು ಬುಧವಾರವನು ॥
ನಡುಹಗಲೆ ಇನಶಶಿ ಶುಕ್ರಶನಿಗಳಲಿ ।
ತೊಡಗುವುದು ಮೇಲು ಸರ್ವೇಶ ॥೧೦೪॥

ಪಡಿನೆಳಲ ಅಡಿಗಳಿಗೆ ।
ಒಡಲಳತೆ ಒಡಗೂಡಿ ॥
ಇಡಿಯಿಂದ ನಲವತ್ತೆರಡ ಭಾಗಿಸಲು ।
ನಡೆದಿರುವ ಘಂಟೆ ಸರ್ವೇಶ ॥೧೦೫॥

*   *   *

---

† ಸೂರ್ಯಗ್ರಹಣ	ಚಂದ್ರಗ್ರಹಣ
6—5—1864	4—10—1884
17—5—1882	17—10—1902
28—5—1900	27—10—1920
8—6—1918	7—11—1938
19—6—1936	

ನವಮಾಸ ಜಠರದಲಿ ।
ನವಗ್ರಹ ಎಸಗಿದುದ ॥
ಸವಿಯದಲೆ ಬರಿದೆ ಕೇಳಿದರೇನುಂಟು ।
ಭವಿಷ್ಯದ ಪೊಳ್ಳ? ಸರ್ವೇಶ ॥೧೦೬॥

ಹಿಂದಿನದು ಕಂದಹುದು ।
ಇಂದಿನದೆ ಕುಂದಣವು ॥
ಮಂದಮತಿ ಬಲ್ಲನೆ ಮುಂದೆ ಬರುವುದನು?
ಅಂದು ನೀನಿರೆಯ? ಸರ್ವೇಶ ॥೧೦೭॥

ಏನನ್ನು ತಿಳಿದರೂ ।
ತಾನಳಿವ ಕಾಲದಾ ॥
ಜ್ಞಾನವೇ ಬೇಡ; ತಿಳಿಯಲು ಕೀಲೆಲ್ಲ ।
ತಾನೆ ಕಳಚುವುದು ಸರ್ವೇಶ ॥೧೦೮॥

೫ ಶೀಲಪದ್ಧತಿ

ಕೃತಜ್ಞತೆ ಶಿಷ್ಟನಿಗೆ ।
ಕೃತಘ್ನತೆ ದುಷ್ಟನಿಗೆ ॥
ಹಿತವಿರ್ಕು, ಉಪಕೃತಿಗಿವನೆ ಸಲ್ಲಿಪರ್ ।
ಪ್ರತಿಯಾಗಿ ಅವರು ಸರ್ವೇಶ ॥೧೦೯॥

ಅಸಹ್ಯಕೆ ನೊಣಂಗಳು ।
ಕುಸುಮಕ್ಕೆ ಮಧುಪಗಳು ॥
ಮುಸುಕುವೊಲು ಕುಂದು ಚಂದವ ಹುಡುಕುವರು ।
ಪಿಸುಣಿ ಸುಗುಣಿಗಳು ಸರ್ವೇಶ ॥೧೧೦॥

ಕಳ್ಳನಾ ಸಂಗವದು ।
ಮುಳ್ಳನ್ನು ತುಳಿದಂತೆ, ॥
ಒಳ್ಳೆಯರ ಸಂಗದೊರೆತರೆ ಬೆನಕನಾ ।
ಎಳ್ಳ ಸವಿದಂತೆ ಸರ್ವೇಶ ॥೧೧೧॥

ಕೆಳೆಜೆಳೆಯೆ ಕೀಳಿನಲಿ ।
ಇಳಿದಂತೆ ಕೂಪಕ್ಕೆ; ॥
ಖಲರಿಂದ ಬೇರಿಡು ನೀರ ಮೇಲಿರುವ
ಒಳ್ಳೆಣ್ಣೆ ತೆರದಿ ಸರ್ವೇಶ ॥೧೧೨॥

ಠಕ್ಕನಿಗೆ ಮನೆಯನ್ನು ।
ಒಕ್ಕಲಿಗೆ ಕೊಡಿಸದಿರು ॥
ರೊಕ್ಕ ಕಸಿದಾನು ಮನೆಯಲೆ ಹಾಲನ್ನು ।
ಬೆಕ್ಕು ಕದಿವಂತೆ ಸರ್ವೇಶ ॥೧೧೩॥

ನೋಡಲ್ಕೆ ಹಿತನಾದ ।
ಕೇಡಿಗನು ಬಲುನೀಚ ॥
ಜೋಡಿಬಲೆ ಹೂಡಿದ ಜೇಡ ಸೈತಿದ್ದು ।
ಕಾಡದೇಂ ನೊಣವ ? ಸರ್ವೇಶ ॥೧೧೪॥

ಏನೇನು ಸಿಕ್ಕದಿರೆ ।
ತಾನೆಯೇ ಸಿಕ್ಕಿಕೊಳೆ ॥
ಮಾನಗೆಟ್ಟ ಕಳ್ಳ ಕೊರಗೆ, ಮರಗುವನೆ ।
ಹೀನತನಕಾಗಿ? ಸರ್ವೇಶ ॥೧೧೫॥

ಹುಟ್ಟಿನಲಿ ಸೇರಿರುವ ।
ಕೆಟ್ಟತನ ಬಿಟ್ಟೀತೆ? ॥
ಕಿಟ್ಟವದು ಬೆಳ್ಳಿ ಅಪ್ಪುದೆ ಹಾಲಿಂದ ।
ಎಷ್ಟು ತೊಳೆದರೂ? ಸರ್ವೇಶ ॥೧೧೬॥

ಗುಳ್ಳದಾ ಹಣ್ಣನ್ನು ।
ಕಳ್ಳಿಯಾ ಹಾಲನ್ನು ॥
ಬಲ್ಲವರು ಬಣ್ಣಕ್ಕೊಲಿದು ಸವಿಯುವರೆ?
ಒಳ್ಳೆಗುಣ ಮುಖ್ಯ ಸರ್ವೇಶ ॥೧೧೭॥

ದುಷ್ಟಜಾಣನಿಗಿಂತ ।
ಕೆಟ್ಟವನು ಬೇರಿಲ್ಲ ॥
ದುಷ್ಟತನ ಬಿಟ್ಟು ಬಿಟ್ಟರೆ, ಅವಗಿಂತ ।
ನೆಟ್ಟನವನಿಲ್ಲ ಸರ್ವೇಶ ॥೧೧೮॥

ಕಲ್ಲಂತೆ ಕರಟಿರಲು ।
ಮುಳ್ಳಂತೆ ಮುಸುಕಿರಲು ॥
ಕೊಳ್ಳರೇಂ ತೆಂಗು ಹಲಸನು? ಹೊರನೋಟ ।
ವಲ್ಲ ಸವಿಮುಖ್ಯ ಸರ್ವೇಶ ॥೧೧೯॥

ಹುಲ್ಲಹುರಿ ಯಾದರೇಂ ।
ಬಲ್ಲಿದಾ ಬಿದುರನ್ನು ॥
ಬಿಲ್ಲಾಗಿ ಬಾಗಿಸದಿಹುದೆ? ನಾರಿಯಿಂ ।
ಬಲ್ಲಿದನೆ ನರನು? ಸರ್ವೇಶ ॥೧೨೦॥

ಜೇಲಿಯಾ ಸೀಗೆಯನು ।
ಹೋಲುವರು ಸ್ವೇಚ್ಛೆಯಾ ॥
ಬಾಲೆಯರು ಒಳಗೂ ಹೊರಗು ಎಲ್ಲವನು ।
ಹಾಳು ಮಾಡರೇಂ ಸರ್ವೇಶ ॥೧೨೧॥

ಕುತ್ತವಿರೆ ನಿಜಗುಣದಿ ।
ಮುತ್ತಂತೆ ಇರಲೇನು ? ॥
ಉತ್ತಮನ ಪೂಜೆಗೆ ಎತ್ತ ಸಲ್ಲುವುದು ।
ಮುತ್ತಗದ ಹೂವು ಸರ್ವೇಶ ॥೧೨೨॥

ಇಂಪು ಪೆಂಪಿಂದೇನು ? ।
ಗುಂಪು ಬಳಗಿರಲೇನು ? ॥
ಸಂಪನ್ನೆಯಲ್ಲದ ಕನ್ನೆ ಕನ್ನೆಯದಿಲ್ ।
ಸೊಂಪ ಪಡದೇನು ಸರ್ವೇಶ ॥೧೨೩॥

ಸೊಂಪುಸೊಂಪೆನಲೇಕೆ ? ।
ಸೊಂಪಾಗಿ ಇಹಳೆಲ್ಲ ॥
ಸಂಪನ್ನೆಯಲ್ಲ; ಮಿಕ್ಕೆಯು ಕೆಂಪಿದ್ದು ।
ಇಂಪಹುದೆ ಸವಿಯೆ ? ಸರ್ವೇಶ ॥೧೨೪॥

ಬಗೆಬಗೆಯ ಭೋಗವಿರೆ ।
ನಗುತಿಹರು ಜಾರೆಯರು ॥
ಹೊಗೆಯಾಡೆ ಬಡತನ, ಪತಿಯ ಕಾಣುವರು ।
ಹಗೆಯ ಕಂಡಂತೆ, ಸರ್ವೇಶ ॥೧೨೫॥

ಜಾರೆಯರು ನರರನ್ನು ।
ಜಾರಿಪರು ನರಕಕ್ಕೆ ॥
ನಾರಿಮಣಿ ಉಭಯಕುಲಕೆ ಸ್ವರ್ಗದಾ।
ದಾರಿ ತೋರಿಪಳು ಸರ್ವೇಶ ॥೧೨೬॥

*   *   *   *

ಉತ್ತಮನು ಲೋಕದಲಿ ।
ಮುತ್ತಂತೆ ಬೆಳಗುತ್ತ ॥
ಸತ್ಯವೇ ಮೂರ್ತಿಗೊಂಡೊಲು ಇರುತಿಹನು ।
ಸ್ತುತ್ಯನವ ಜಗದಿ ಸರ್ವೇಶ ॥೧೨೭॥

ಕತ್ತಲಂ ಚಂದ್ರಮನು ।
ಉತ್ತರಿಪ ತೆರದಲ್ಲಿ ॥
ಉತ್ತಮನು ದೀನಜನರನು ಪೊರೆಯುವನು ।
ಕುತ್ತವನು ಹರಿಸಿ, ಸರ್ವೇಶ ॥೧೨೮॥

*   *   *   *

೬ ಅವಯವಪದ್ಧತಿ

ಪಂಚೇಂದ್ರಿಯವಲ್ಲದೆ ।
ವಂಚಕರು ಬೇರುಂಟೆ? ॥
ವಂಚಕಾಗ್ರಣಿಯಹ ಕಣ್ಣು ಉಳಿದವನು ।
ಮಿಂಚಿಪುದು ತಾನೆ ಸರ್ವೇಶ ॥೧೨೯॥

ಚಿರಜೀವಿಯೆನ್ನಿಪುದು ; ।
ಬರಿನೆಳಲ ಚಿತ್ರವನು ॥
ಕಿರಿದನ್ನು ದೂರದುದನ್ನು ನೋಡಲ್ಕೆ ।
ನೆರವಿಲ್ಲ ಕಣ್ಣು ಸರ್ವೇಶ ॥೧೩೦॥

ಬೆಟ್ಟಗಳ ಮೇಲ್ಮರವ ।
ಬೆಟ್ಟುದ್ದ ಗಿಡದಂತೆ ॥
ಕೆಟ್ಟಬಿಸಲಿನ ಝುಳವನ್ನು ಜಲದಂತೆ ।
ದೃಷ್ಟಿ ತೋರಿಪುದು ಸರ್ವೇಶ ॥೧೩೧॥

ಹಣ್ಣಿಂಗೆ ಜಿಹ್ವೆಯನು ।
ಹೆಣ್ಣಿಂಗೆ ವಪುವನ್ನು ॥
ಮಣ್ಣಿಗೆ ಮನವನು, ಗಂಧಕೆ ನಾಸೆಯನು ।
ಕಣ್ಣು ದೂಡುವುದು ಸರ್ವೇಶ ॥೧೩೨॥

ಹೆಣ್ಣುಗಳ ಸೆರಗಿಂದ ।
ಹಣ್ಣಿದಾ ಬಲೆಯೊಳಗೆ ॥
ಕಣ್ಣೆಂಬ ನಾಯಿ ದೂಡುಗು ಮೃಗದಂಥ ।
ಬಣ್ಣಗೇಡಿಯನು ಸರ್ವೇಶ ॥೧೩೩॥

ಕಣ್ಣೆಲ್ಲ ಭಾವನೆಯ ।
ಹಣ್ಣಿಪುದು ಮನದೊಳಗೆ ॥
ಕಣ್ಣಿಂದ ಹಿತಾಹಿತಗಳು; ಎಲ್ಲವನು ।
ಕಣ್ಣೆ ಗೈಸುವುದು ಸರ್ವೇಶ ॥೧೩೪॥

ಸುಡುತಿರುವ ಬೆಂಕಿಯನು ।
ಕೆಡಿಸುತಿಹ ಕಣ್ಣನ್ನು ॥
ಬಿಡುವುದಳವಲ್ಲ; ಹಿಡಿತದಲ್ಲಿಟ್ಟು ।
ಪಡಿಬೇಕು ಹಿತವ ಸರ್ವೇಶ ॥೧೩೫॥

* * *

ಮಾತಿಂದೆ ಹಗೆನಗೆಯು, ।
ಮಾತಿಂದೆ ಅಳಿವುಳಿವು, ॥
ಮಾತಿಂದೆ ಸರ್ವಸಿದ್ಧಿಯು; ಮಾತಹುದು ।
ಮಾತೆ ಕವನಕ್ಕೆ, ಸರ್ವೇಶ ॥೧೩೬॥

ವಿವರಗಳ ಬಲುಕೇಳಿ, ।
ಕಿವಿಗಿಲ್ಲ ಗವಸಣಿಗೆ ॥
ಸವಿಯಾಗಿ ತುಸವನೆ ಹೇಳಿ, ಬಾಯ್ಗುಂಟು ।
ಕವಿವ ತುಟಿಯೆರಡು ಸರ್ವೇಶ ॥೧೩೭॥

ಬೆಲ್ಲವಿರೆ ತೌಡನ್ನು ।
ಮೆಲ್ಲುವರು; ಗೌರವವ ॥
ಸಲ್ಲಿಪರು ರಾಗರಚನೆಯು ಪೊಳ್ಳಾದ ।
ಸೊಲ್ಲಿಗೆಲ್ಲಕ್ಕು ಸರ್ವೇಶ ॥೧೩೮॥

ಒಪ್ಪವನು ನುಡಿಗಿಡದೆ ।
ತಪ್ಪುಗಳ ನೊಪ್ಪಿಕೊಳೆ ॥
ಎಪ್ಪತ್ತುಸುಳ್ಳ ಹುಟ್ಟಿಪ ಕಷ್ಟವೇ ।
ತಪ್ಪುವುದು ಜನಕೆ ಸರ್ವೇಶ ॥೧೩೯॥

ಸುಳ್ಳೆಂಬ ಮುರಿಗಾಲ್ಗೆ ।
ಪೊಳ್ಳೆಂಬ ಮರಗಾಲು ॥
ಪೊಳ್ಳಿಂಗೆ ಜಳ್ಳುಡಿಯೆನುವ ಮಣ್ಗಾಲು ।
ಉಳ್ಳಷ್ಟು ಕುಂಟಿ ಸರ್ವೇಶ ॥೧೪೦॥

ಕೇಳುವಾ ತೆರದಲ್ಲೆ ।
ಕೇಳುವಗೆ ಮಾರುಲಿಯೆ ॥
ಹೇಳಲಮ್ಮದಲೆ ತಾನೆಯೆ ರೇಗುವನು ।
ಹೇಳಿಬಿಡೆ ಮೇಲು ಸರ್ವೇಶ ||೧೪೧||

* * * *

ಪೆರೆಗೊಂದು ಬೊಗಳಿದರೆ, ।
ಮೊರೆಕೇಳಿ ನೂರಾರು ॥
ಒರಲುವವು ಬರಿದೆ; ಬಿರುನುಡಿ ಗೊತ್ತಾಸೆ ।
ಹಿರಿದು ಧರೆಯಲ್ಲಿ ಸರ್ವೇಶ ||೧೪೨||

ಹೀನನೇನಂದರೂ ।
ಮಾನಹಾನಿಯದಲ್ಲ ॥
ಮಾನವರ ಹಾನಿವೃದ್ಧಿಯು ಅಧೀನಗ ।
ಳೇನಲ್ಲ ಅವಗೆ ಸರ್ವೇಶ ||೧೪೩||

ಖಲಜನರ ನಾಲಗೆಗೆ ।
ಕೆಲಸಗಳ ಬಗೆಯೆರಡು ॥
ಹಲವೂಟ, ಹೊಲಸು ನುಡಿಗಳು ; ನಾಲಗೆಯೆ ।
ಕುಲವ ತೋರಿಪುದು ಸರ್ವೇಶ ||೧೪೪||

ಸುಧೆಗರೆವ ಕೆಚ್ಚಲಲಿ ॥
ರುಧಿರ ಬರೆ ಸರಿಯಲ್ಲ ॥
ಮೃದುನುಡಿಯನುಳಿದು ನಿಷ್ಠುರೋಕ್ತಿಗಳ ॥
ಒದರುವುದೆ ಅಲ್ಲ ಸರ್ವೇಶ ||೧೪೫||

ಆಡದಿರೆ ಬಿರುನುಡಿಯ ।
ನೋಡದಿರೆ ಪರಸತಿಯ ॥
ಜೋಡಿತುಟಿ ರಪ್ಪೆಗಳೆಂಬ ಮೂಡಿಗಳ ।
ಮಾಡಿಹನು ಬೊಮ್ಮ ಸರ್ವೇಶ ॥೧೪೬॥

ಮಾಣಿಕಕೆ ದಿವ್ಯಕಳೆ ।
ಜಾಣರಿಗೆ ನಾಣ್ನುಡಿಯು ॥
ಪೋಣಿಸಿದ ಪದಕೆ ಸದರ್ಥ, ಮಾನಿಗೆ ।
ವೇಣುದನಿ ಮುಖ್ಯ ಸರ್ವೇಶ ॥೧೪೭॥

೭ ಬಂಧು ಪದ್ಧತಿ

ನೀರೊಳಗೆ ಮುಳುಗಿರಲು ।
ನೀರೇಜ ಒದ್ದೆಯೇ? ॥
ದಾರಾದಿ ಬಳಗ ಮಧ್ಯದಿ ಕೆಟ್ಟಾನೆ ।
ಸಾರ ಸುಜ್ಞಾನಿ ಸರ್ವೇಶ? ॥೧೪೮॥

ಒಲುಮೆಯಾ ಕಿರಣವನು ।
ನಿಳಯದಾ ಸಾಧನವು ॥
ಸೆಳೆಸೆಳೆದು ಇಳೆಗೆ ತಳಿಪುದು ಕಾಲದಲಿ ।
ಹಳಿಗಾಜ ತೆರದಿ ಸರ್ವೇಶ ॥೧೪೯॥

ಒಡಹುಟ್ಟಿದವಳ, ಕೈ, ।
ಹಿಡಿದವಳ, ಸುಪುತ್ರಿಯು, ॥
ಹಡೆದವಳ ಒಲುಮೆಗಳಿರ್ಕು ಏಣಿಯನು ।
ಅಡರುವಾ ತೆರದಿ ಸರ್ವೇಶ ॥೧೫೦॥

ಜ್ಯೋತಿಯಿಂ ನೆರವಿಲ್ಲ ।
ಖ್ಯಾತಿಯಿಂ ಧನವಿಲ್ಲ ॥
ಮಾತಿಗಿಂ ತಿಳಿಪ ಸಾಧನ ಬೇರಿಲ್ಲ, ।
ಮಾತೆಗಧಿಕಿಲ್ಲ ಸರ್ವೇಶ ॥೧೫೧॥

ಉಮ್ಮಳದೆ, ಕಳವಳದೆ, ।
ಗುಮ್ಮಬರೆ, ಇರದೆ ಹೊರ ॥
ಹೊಮ್ಮುವುದು ಶಾಂತಿಮಂತ್ರದ ತೆರನಿರುವ ।
ಅಮ್ಮನೆನುವ ನುಡಿ ಸರ್ವೇಶ ॥೧೫೨॥

ಅತ್ತೆಯರು, ಗುರುಪತ್ನಿ ।
ಎತ್ತಿ ಆಡಿಸಿದಾಕೆ ॥
ಅತ್ತಿಗೆಯು, ಜನ್ಮಭೂಮಿ-ಇವರೆಲ್ಲ ।
ಹೆತ್ತವಳ ಸಮರು ಸರ್ವೇಶ ॥೧೫೩॥

ಧರೆಯ ಬಲು ಬಳಗದಲಿ ।
ಪೊರೆವವನು, ಕುಲಗುರುವು ॥
ಹಿರಿಯಣ್ಣ, ಮಾವ, ಮಾತುಳ—ಇವರೆಲ್ಲ ।
ಸರಿಯಹರು ಪಿತಗೆ ಸರ್ವೇಶ ॥೧೫೪॥

ಕೆಟ್ಟಾಗ ಸರಿಮಾಡಿ ।
ಕೊಟ್ಟಾತ ಅನುಬಂಧಿ ॥
ಹಿಟ್ಟಿಕ್ಕಿದವಳೆ ಮಾತೆಯು, ಕಲೆ ಕಲಿಸಿ ।
ಕೊಟ್ಟಾತ ಪಿತನು ಸರ್ವೇಶ ॥೧೫೫॥

ಹಿತವಕ್ಕು ತಾಯ್ಬಳಗ ।
ಪಿತನಜನ ಹೊಂದಿರರು ॥
ಸತಿಯಜನ ತಮ್ಮಳಿಯನ ಉಳಿಸುವರು ।
ಸತಿಯಿಂದೆ ವಸತಿ ಸರ್ವೇಶ ॥೧೫೬॥

ತನ್ನವರ ಕೈಬಿಟ್ಟು ।
ನನ್ನ ಕೈ ಹಿಡಿದಾಕೆ ॥
ನನ್ನಯಾ ನಿಳಯಕೆ ರಾಣಿ; ತೊತ್ತಲ್ಲ ।
ವೆನ್ನುವುದು ನನ್ನಿ ಸರ್ವೇಶ ॥೧೫೭॥

ಉರಿಯುದಲೆ ಮೆರೆಯುದಲೆ ।
ನಿರುತದಲಿ ಅತ್ತೆಯಿಂ॥
ಸರಿಯೆನಿಸಿಕೊಂಬ ಸೊಸೆ ತಾ ಸರಿಯಕ್ಕು ।
ಪರಮಮಂಗಳೆಗೆ ಸರ್ವೇಶ ॥೧೫೮॥

ಪಿತನನ್ನು ಸುಗುಣದಲಿ ।
ಸುತ ಮಿಾರೆ ಶುಭಕರವು ॥
ಪಿತನೇರಲಟ್ಟುವ, ಸುತನು ಬೆಟ್ಟವನು ।
ಹತ್ತುವುದು ಲೇಸು ಸರ್ವೇಶ ॥೧೫೯॥

ತನ್ನೊಡಲ ಪಾಲಿತ್ತು ।
ಚೆನ್ನಾಗಿ ಪಾಲಿಸಿದ ॥
ಸನ್ನುತೆಗೆ ಕಡೆಯಲಿ ನೀರ ನೀಯದವ ।
ಕುನ್ನಿಗೂ ಕೀಳು ಸರ್ವೇಶ ॥೧೬೦॥

ಮಲತಾಯಿ, ಉಲಿವತ್ತೆ ।
ಕೆಲೆವ ಪತಿ, ಬಲಮಗನ ॥
ಅಳಲಿಂಗೆ ಸಿಕ್ಕಿದ ಸತಿಗೆ ಭೂತಲವೆ ।
ಹೊಲಸು ತಲಾತಲ ಸರ್ವೇಶ ॥೧೬೧॥

ಶುದ್ಧಸೋವಾರಿಯನು ।
ವಿದ್ಯೆಯಿಲ್ಲದವನಸು ॥
ಬುದ್ಧಿಹೀನನನು ಜೆನ್ನಲಿ ಬಿದ್ದಜನ ।
ರಿದ್ದುಹೊದ್ದಿರರು ಸರ್ವೇಶ ॥೧೬೨॥

ಜಾತಿಗಿಂ ಒಡಕಿಲ್ಲ ।
ಭೀತಿಗಿಂ ಕುತ್ತಿಲ್ಲ ॥
ಜ್ಞಾತಿಗಿಂ ಕಲಹಮೂಲವು ಮತ್ತಿಲ್ಲ ।
ಖ್ಯಾತಿ ಹಿತವಿಲ್ಲ ಸರ್ವೇಶ ॥೧೬೩॥

ಘೊರೆಯಾಗಿ ಕ್ಷುಧೆಹರಿಸೆ ।
ಗುರುವಾಗಿ ಅಘಹರಿಸೆ ॥
ಸರಿಯಹರು ಪಿತನಿಗೆ; ಇದಕೆ ತಪ್ಪಿದರೆ ।
ಅರಿಗಳೇ ಅಹರು ಸರ್ವೇಶ ॥೧೬೪॥

ಬರದಲ್ಲಿ ನರರನ್ನು ।
ಪೊರೆವವನು ನರರಾಯ ॥
ಬರಿದೆಯೇ ಜನರಿಂ ಕರವ ಹಿರಿವಾತ ।
ದುರುಳ ಜವರಾಯ ಸರ್ವೇಶ ॥೧೬೫॥

ತನ್ನ ತಾ ಅರಿಯದನು ।
ನನ್ನಿಯನು ಬೋಧಿಪುದು ॥
ಬೆನ್ನಲ್ಲಿ ಹೊತ್ತ ಕತ್ತೆಯು 'ಹಾಡಿದಪೆ' ।
ಎನ್ನುವೊಲಕ್ಕು ಸರ್ವೇಶ ॥೧೬೬॥

ಬಡಿವಾರದುಪದೇಶ ।
ಕೊಡುವವರು ಬಹುಮಂದಿ ॥
ನುಡಿದಂತೆ ನಡೆದು ತೋರಿಪ ಗುರುವರ್ಯ ।
ಮೃಡಗೆ ಸಮನಕ್ಕು ಸರ್ವೇಶ ॥೧೬೭॥

ಅರ್ಥಪದ್ಧತಿ.

ಪುರುಷಾರ್ಥ ನಾಲ್ಕಿರಲು- ।
ಹುರುಳಿಹುದು ಅರ್ಥದಲೆ ॥
ಎರೆದುದನು ಪುರುಷಗೆ ಸಲ್ಲಿಸಿದರೇನು ? ।
ಪರಕೆ ಸಲ್ಲುವುದೆ? ಸರ್ವೇಶ ॥೧೬೮॥

* * *

ಕೂಡದಿಹ ಕಾಲದಲಿ ।
ಓಡಿನಾ ಚೂರಿಲ್ಲ; ॥
ಕೂಡಿಬರೆ ಓಡಿಬರುವುದು ಹೊನ್ನಹೊಳೆ ।
ಆಟವಿದು ವಿಧಿಗೆ ಸರ್ವೇಶ ॥೧೬೯॥

ಈಶಕೃಪೆಯುಂಟಾಗೆ ।
ಆಶಿಸದೆ ಸಿರಿಬರ್ಕು ॥
ಮೋಸದಿಂ ಕಪ್ಪುರದಂತೆ ಕರಗುವುದು ।
ಕಾಸೆಲ್ಲ ಬೇಗ ಸರ್ವೇಶ ॥೧೭೦॥

* * *

ಗಳಿಸುವಾ ಬಲುಶ್ರಮ ।
ಉಳಿಸುವಾ ಅತಿಯಾಸೆ ॥
ಕಳೆಕೊಳ್ವ ನಿತ್ಯಭೀತಿಯು-ಈ ಮೂರು ।
ಮಿಳಿದಿಹವು ಧನಕೆ ಸರ್ವೇಶ ॥೧೭೧॥

ಪಟ್ಟಣದಿ ನಿಲಿಸುವುದು ।
ಪಟ್ಟೆಮಡಿ ಉಡಿಸುವುದು ॥
ಕೆಟ್ಟತನ ಕಲಿಸಿ ಕೊಲಿವುದು ಪಿತನಿಟ್ಟ ।
ಬಿಟ್ಟಹಣವಯ್ಯ ಸರ್ವೇಶ ॥೧೭೨॥

*　　　*　　　*

ಬಲ್ಲಿದನ ಸೊಲ್ಲೆಲ್ಲ ।
ಒಳ್ಳೆಯದು ಯೆನ್ನುವರು ॥
ಜೆಲ್ಲದೊಲು ಬಡವ ನುಡಿದರು ಅವನನ್ನು ।
ಅಲ್ಲಗಳೆಯುವರು ಸರ್ವೇಶ ॥೧೭೩॥

ಧನ ಸೇರೆ 'ಸುಕುಲೀನ' ।
ಧನ ತೀರೆ 'ಕುಲಹೀನ ॥
ಧನಕಿಂತ ಕೀಳು' ಎಂಬರು ಜನರೆಲ್ಲ; ।
ಧನಬಲವೆ ಬಲವು ಸರ್ವೇಶ ॥೧೭೪॥

*　　　*　　　*

ಕಾಯಕದೆ ನಾಡಿನಾ ।
ನಾಯಕನು ತಾನಪ್ಪ ॥
ಕಾಯಕವು ಅಳಿಯೆ ಜತೆಯಲೆ ಸೊಬಗಳಿದು ।
ನಾಯಪರಿಯಪ್ಪ ಸರ್ವೇಶ ॥೧೭೫॥

ಏಳುವಾ ಹೊಗೆಯಂತೆ ।
ಮೇಲುಮೇಲಕೆ ಸಾಗಿ ॥
ಮೇಲುಮೇಲನ್ನೆ ಸಾಧಿಪುದುದ್ಯೋಗ ।
ಶೀಲರಾ ಧ್ಯೇಯ ಸರ್ವೇಶ ॥೧೭೬॥

ಬಲುಕೋಪ, ಆತುರವು ।
ಆಲಸಿಕೆಯನಭ್ಯಾಸ ॥
ಚಲಚಿತ್ತ, ಉಪೇಕ್ಷೆಗಳಾ ದೆಶೆಯಿಂದ ।
ಕೆಲಸ ಹೊಲಸಕ್ಕು ಸರ್ವೇಶ ॥೧೭೭॥

* * *

ಬಂದೆಲ್ಲ ಹಣವ ಮನ- ।
ಬಂದಂತೆ ಬಳಸಿದರೆ ॥
ಕುಂದಕ್ಕು; ಮುಂದಕೆ ಕಯ್ಯು ಬರಿದಾಗೆ ।
ನೊಂದು ನಲಗುವೆವು ಸರ್ವೇಶ ॥೧೭೮॥

ಬಡತನಕೆ ಹೆಗ್ಗುರುತು ।
ಪೃಥವಾದ ಋಣಬಾಧೆ ॥
ಒಡಲಿಗಿಲ್ಲದಲೆ ಮಡಿವುದೆ ದುಡಿಯದಿಹ ।
ಬಡವನಿಗೆ ಶಾಸ್ತಿ ಸರ್ವೇಶ ॥೧೭೯॥

ಬಡತನವು ಬರಡಲ್ಲ ।
ಎಡೆಗೊಡದು ಪಾಪಕ್ಕೆ ॥
ದುಡುಮೆಗುತ್ತೇಜಕ ವಕ್ಕು ; ಒಡೆತನಕೆ ।
ಅಡಿಯ ಹದಿಯಕ್ಕು ಸರ್ವೇಶ ॥೧೮೦॥

ಉಡುವಲ್ಲಿ ಉಣುವಲ್ಲಿ ।
ಬಡವಂಗು ಬಲ್ಲಿದಗು ॥
ಬಿಡುವಿದ್ದರೇನು ? ಎಲ್ಲರು ಸಮರಹರು ।
ಕಡೆಗೆ ಚಿತೆಯಲ್ಲಿ ಸರ್ವೇಶ ॥೧೮೧॥

ಬಡತನವು ಬರಿ ಊಹೆ ।
ಅಡಿಯವಗೆ ಸರಿನೋಡೆ ॥
ಬಡತನವೆ ತೋರದು ; ಹಿಡಿತ ತೃಪ್ತಿಗಳು ।
ತಡೆಯುವವು ಅದನು ಸರ್ವೇಶ ॥೧೮೨॥

ಹಣತೂಕ ಕಷ್ಟವನು ।
ಮಣತೂಕ ವೆನ್ನುವೆವು ॥
ಮಣತೂಕ ಸುಖವ ಹಣಭಾರೆನ್ನುವೆವು ; ।
ಗೊಣಗು ಸಹಜವಲೆ ಸರ್ವೇಶ ॥೧೮೩॥

ಮಳೆಯುಹುಳು ಹಾರುತ್ತ ।
ಬಳಿಕಿನಲಿ ಹರಿಯುತ್ತ ॥
ನಿಳಯದಲಿ ನಿಲುವ ತೆರದಲಿ ಕಷ್ಟಗಳು ।
ಕೆಲಕಾಲ ವಿರ್ಕು ಸರ್ವೇಶ ॥೧೮೪॥

ಕಷ್ಟವನು ದೂರದಲೆ ।
ಬಿಟ್ಟು ನಡೆವುದಕಿಂತ ॥
ಮುಷ್ಟಿಯಿಂ ಜಾರ್ವುದಕಿಂತ ಗೆಲ್ಲುವಾ ।
ದಿಟ್ಟತನ ಲೇಸು ಸರ್ವೇಶ ॥೧೮೫॥

ಕಷ್ಟವಾದಷ್ಟಷ್ಟು ।
ಇಷ್ಟವಲೆ ನಿಜಕಾರ್ಯ ॥
ಎಷ್ಟೆಷ್ಟು ಸುಲಭ ವಿರಲೂ ಪರಕಾರ್ಯ ।
ಭ್ರಷ್ಟವೇ ಅಕ್ಕು ಸರ್ವೇಶ ॥೧೮೬॥

ಕಿತ್ತಾಟ ಹತ್ತಿಸುತೆ ।
ಅತ್ತಿಷ್ಟು ಇತ್ತಿಷ್ಟು ॥
ಕಿತ್ತು ತಿನುವಾತನು ಶುದ್ಧ ಕಳ್ಳನಿಗು ।
ಅತ್ತತ್ತ ವಕ್ಕು ಸರ್ವೇಶ ॥೧೮೭॥

ಹೊರಗಿಂದ ತಂದುದೇ ।
ಸರಿಯಾದ ವರಮಾನ ॥
ಇರುವಲ್ಲೆ ಹೇಗೊ ಗಳಿಸಲು ಅನುಜರಿಂ ।
ತೆರವ ಕಸಿವಂತೆ ಸರ್ವೇಶ ॥೧೮೮॥

ಅನುದಿನವು ಶೋಸಿಸದೆ ।
ಧನವಿಲ್ಲ ನಗರದಲಿ ॥
ಅನುವಿಲ್ಲ ಜೀವನ ಅಲ್ಲಿ; ಹಳ್ಳಿಯಾ ।
ಘನವಾಸ ಲೇಸು ಸರ್ವೇಶ ॥೧೮೯॥

ಬಗೆಬಗೆಯ ಭೋಗದಲಿ ।
ನಗರತಾ ನಗಲೇನು? ॥
ಅಘಮಯವು ಪಟ್ಟಣ; ಕಷ್ಟ ಸುಜನರಾ ।
ಒಗೆತನವು ಅಲ್ಲಿ ಸರ್ವೇಶ ॥೧೯೦॥

ಹಳ್ಳಿಯಾ ಜನಗಳಿಗೆ ।
ಒಳ್ಳೆಯಾ ದನಗಳಿರೆ ॥
ಕೊಳ್ಳೆ ಹೈನಾಗಿ ಬೆಳೆಗಳು ವೈನಾಗಿ ।
ಬೆಳ್ಳಿಮಯ ವಕ್ಕು ಸರ್ವೇಶ ॥೧೯೧॥

ಕೊಲ್ಲದಿರೆ ಪೊರೆದಂತೆ ।
ಅಳಿಸದಿರೆ ಒಲಿದಂತೆ; ॥
ಸುಲಿಯದಿರೆ ಕೊಟ್ಟಂತೆಯೇ; ಉಳಿಸಿದರೆ ।
ಗಳಿಸಿದಂತಕ್ಕು ಸರ್ವೇಶ ॥೧೯೨॥

* * *

ಬೇಡುವುದು ಕಟುತರವು ।
ಕಾಡ್ವುದಕೆ ಅದು ನಂಟು ॥
ಹೇಡಿತನಕದೇ ಮೂಲವು; ವ್ಯತಿಲೇಸು ।
ಬೇಡುವುದಕಿಂತ ಸರ್ವೇಶ ॥೧೯೩॥

ನೀಡುವುದು ಪುಣ್ಯಕರ ।
ಬೇಡುವುದು ಪಾಪಕರ ॥
ಬೇಡುವುದು, ಕೊಡದುದು ನೀಡಗೊಳಿಸದುದು ।
ನೋಡೆ ಸಮವಪ್ಪು ಸರ್ವೇಶ ॥೧೯೪॥

ವಿವಿಧ ಸೂಕ್ತಿ ಪದ್ಧತಿ

ಹೊಗೆಯದಾ ಕೆಂಡವನು ।
ಬೊಗಳದಾ ನಾಯನ್ನು ॥
ನಗುವ ಹಗೆಯನು ಪ್ರಶಾಂತ ನದಿಯನ್ನು ।
ಮಿಗಿಲು ನಂಬುವುದೆ ? ಸರ್ವೇಶ ॥೧೯೫॥

ಹುಚ್ಚಿದ್ದ ನಾಯನ್ನು ।
ಪೆಚ್ಚನಾ ಮಾತನ್ನು ॥
ಇಚ್ಛೆಗಳು ತೀರ ತೀರದ ಯತಿಯನ್ನು ।
ನೆಚ್ಚುವನೆ ಮೂಢ ಸರ್ವೇಶ ॥೧೯೬॥

ಗುಟ್ಟನ್ನು ಪೊರೆಯುವುದು ।
ಕಷ್ಟವನು ಮರೆಯುವುದು ॥
ಇಟ್ಟಿದ್ದ ವಿತ್ತವ ಉಳಿಸಿಕೊಳ್ಳುವುದು ।
ಕಷ್ಟತಮವಯ್ಯ ಸರ್ವೇಶ ॥೧೯೭॥

ಒಡವೇಗೆ ಹೊಸಮಿರುವು ।
ಒಡೆಯನಿಗೆ ಸೌಜನ್ಯ ॥
ಗುಡಿಯೊಳಗೆ ಘಂಟೆಯು, ನುಡಿಗೆ ಸದರ್ಥವು ।
ಬಿಡದೆ ಇರಬೇಕು ಸರ್ವೇಶ ॥೧೯೮॥

ಅಡವೀಗೆ ಕಿಡಿಯೊಂದು ।
ಹಡಗಿಂಗೆ ಬಿರುಕೊಂದು ॥
ಕೊಡಹಾಲ್ಗೆ ಹನಿಹುಳಿ, ಗುಡಿಗೆ ಆಲದಾ ।
ಜಡೆಯುಕುಡಿ ಮುಳುವು ಸರ್ವೇಶ ॥೧೯೯॥

ಆಡಿದರೆ ಜೂಜನ್ನು ।
ನೋಡಿದರೆ ಪರಳನ್ನು ॥
ಕೂಡಿದರೆ ಸೂಳೆಯು, ತೀಡೆ ತುರುಚಿಯನು ।
ಕೇಡಾಗದಿಹುದೆ ? ಸರ್ವೇಶ ॥೨೦೦॥

ಬಡತನವು ಕವಿದಲ್ಲಿ ।
ಮಡದಿಯರು ಮುನಿವಲ್ಲಿ ॥
ಕಡುನಿಷ್ಠುರದಲಿ, ನಾಡಿಗೆ ಮಡಿವಲ್ಲಿ ।
ಮಿಡುಕದವ ಧೀರ ಸರ್ವೇಶ ॥೨೦೧॥

ಅತಿಮಾತು ಹಿತವಲ್ಲ ।
ಮತಿಗೇಡಿ ಸಖನಲ್ಲ ॥
ಗತಗೋಷ್ಠಿಯನ್ನು ಚಿಂತಿಸಿಫಲವಿಲ್ಲ ।
ಸತಿಯಲ್ಲ ಜಾರೆ ಸರ್ವೇಶ ॥೨೦೨

ವಿದ್ವಾಂಸಗಳಿಗೆ ನೆಲವಲ್ಲ ।
ಹೀನನಿಗೆ ಗುಡಿಯಲ್ಲ ॥
ಮಾನಿನಿಗೆ ತವರೂರಲ್ಲ, ನಗರ ತಾ ।
ಜ್ಞಾನಿಗೇನಲ್ಲ ಸರ್ವೇಶ ॥೨೦೩॥

ಆನೆಗಂಕುಶ ಸನ್ನೆ ।
ಮಾನಕ್ಕೆ ನುಡಿ ಸನ್ನೆ ॥
ಬೋನಕ್ಕೆ ಹಸಿವೆಯೆ ಸನ್ನೆ, ವಿರಕ್ತಿಗೆ ।
ಜ್ಞಾನವೇ ಸನ್ನೆ ಸರ್ವೇಶ ॥೨೦೪॥

ನಯಚಂದ ನುಡಿಗಳಿಗೆ ।
ಹಯಚಂದ ನರಪತಿಗೆ ॥
ಜಯಚಂದ ರಣಕೆ, ಚಾರಗೆ ಭಯಚಂದ ।
ದಯೆಚಂದ ಧನಿಗೆ ಸರ್ವೇಶ ॥೨೦೫॥

ಪರನಾರಿ, ಹರಿನೀರು ।
ಉರಿ, ಉರಗ, ಸುರೆ, ಸುರಗಿ ॥
ಕಿರಿಯಜನ-ಇವರೊಳು ಸರಸ ವಿರಸಕ್ಕು ।
ಮರಣವೇ ಅಕ್ಕು ಸರ್ವೇಶ ॥೨೦೬॥

ಸಿರಲೇಸು, ಸುಜನರ- ।
ನೆರೆಲೇಸು, ಸಹಕಾರ- ॥
ವಿರೆಲೇಸು, ನೀರೋಗ ಲೇಸು, ದೇವನಾ- ।
ಕರುಣವೇ ಲೇಸು ಸರ್ವೇಶ ॥೨೦೭॥

ಊರನ್ನೆ ಅರಿಯದವ ।
ತೋರುವನೆ ದಾರಿಯನು ? ॥
ಏರುವನೆ ಹೆಳವ ಮರವನು ? ಸೇರುವಳೆ ।
ಜಾರೆ ಸ್ವರ್ಗವನು ? ಸರ್ವೇಶ ॥೨೦೮॥

ಹೀರಕವು ಹೀರವನೆ ।
ಚೂರಿಪುದು; ವಾರಣವು ॥
ವಾರಣವ ವಾರಿಕು; ನರರ ಅಸುವನ್ನೆ ।
ಹಾರಿಪರು ನರರು ಸರ್ವೇಶ ॥೨೦೯॥

ಅಶನವೀಯದ ವಿದ್ಯೆ ।
ಹಸಿಗಡಿಗೆಯಾ ನೀರು ॥
ವಿಷಯವನು ಬಿಡದನ ತಪವು, ಹಗಲ ಹಿಮ ।
ಮಸುಳುವವು ಬೇಗ ಸರ್ವೇಶ ॥೨೧೦॥

ಕಿಸುಗಾವಿ ಯತಿಗಳಿಗೆ ।
ಹಸುರುಡಿಗೆ ಫಕೀರಗೆ ॥
ಮಸುಕುಡಿಗೆ ಪಾದ್ರಿಗೆ, ಖಾದಿ ನಾಡಾಳ್ಗೆ ।
ಜಸವಡೆವ ಉಡುಪು ಸರ್ವೇಶ ॥೨೧೧॥

ಪಿಸುಮಾತು ನೆಮ್ಮದಿಗೆ ।
ನಸುಕಿಡಿಯು ಸಾಲ್ಮನೆಗೆ ॥
ತುಸಬಿಳಲು ಕೋಟೆಗೆ, ವಿಷದ ತೊಟ್ಟೊಂದು ।
ಆಸುವಿಂಗೆ ಮುಳೆಯು ಸರ್ವೇಶ ॥೨೧೨॥

ಗೂಳಿಯಾ ಕೊಂಡನ್ನು ।
ಕಾಳಿಂಗ ಪುಚ್ಛವನು ॥
ಚೇಳಿನಾ ತಲೆಯನು ದುಡುಕಿ ಹಿಡಿವಾತ ।
ಬಾಳುವನೆ ಸುಖದಿ ಸರ್ವೇಶ ॥೨೧೩॥

ಪರಸಾಧನ ಪ್ರಕರಣ

ಹಾನಿಪದ್ಧತಿ

ಕಾಮವದು **ಪುರುಷಾರ್ಥ** ।
ನಾಮದಿಂ ಮರೆದರೇಂ? ॥
ಕ್ಷೇಮಕರವಲ್ಲ ; ಕಾಲದೆ ಅದೆಯಲ್ತೆ ।
ಪ್ರೇಮಘಾತಕವು ಸರ್ವೇಶ ॥೨೧೪॥

*　　　　*　　　　*

ತನ್ನನ್ನು ಕಾಣಲ್ಕೆ ।
ಮುನ್ನವೊಗ ನೋಡುವಳು ; ॥
ಚನ್ನವದು ನಗುತಿರೆ; ಹುಬ್ಬ ಗಂಟಿಕ್ಕೆ ।
ತನ್ನ ಮನ್ನಿಪರೆ? ಸರ್ವೇಶ ॥ ॥೨೧೫॥

ಮಧುಪಾಯಿ ಪೆಚ್ಚಪ್ಪ; ।
ಮತಿಗೇಡಿ ಹುಚ್ಚಪ್ಪ; ॥
ಗತಿಗೇಡಿ ಕೋಪಿ ಕಿಚ್ಚಪ್ಪ ನಿವರೊಳು ।
ಅಧಮನೇ ಕೋಪಿ; ಸರ್ವೇಶ ॥೨೧೬॥

ಮರುಳೆಂಬ ಮಾತೃವಿಗೆ ।
ನೆಳೆಕೋಪಿ ಮಧುಪಾಯಿ ॥
ವರಪುತ್ರರಹರು ; ಇವರೊಳು ಕೋಪಿಯೇ ।
ಉರುತರದ ಪಾಪಿ ಸರ್ವೇಶ ॥೨೧೭॥

ಕೋಪಿಯದು ಅರೆಹುಚ್ಚು; ।
ತಾಪಕೊಡೆ ಮತಿಯುಂಟು; ॥
ಕಾಪಟ್ಯ ಉಂಟು ಪರರನು ಕೆಡಿಸಲ್ಕೆ ।
ಕೋಪಿಯೇ ಶನಿಯು ಸರ್ವೇಶ ॥೨೧೮॥

*   *   *

ಅಂಧಕನು ಕಾಣದಲೆ ।
ವಂದಿಯನು ವಂದಿಸನು ॥
ಬಂದವರ 'ಬನ್ನಿ'ಯೆನದವ ನಿಜವಾದ ।
ಅಂಧ ಮೂಕನ್ನೈ; ಸರ್ವೇಶ ॥೨೧೯॥

ಮದವಕ್ಕು ಹೆಮ್ಮರವು; ।
ನಿಧಿಯದಕೆ ತಾಯ್ಬೇರು; ॥
ಮುದರಲದು ಭಾರಕೆ, ಬೇರು ಒಣಗುವುದು; ।
ಹುದುಗಿರಲು ಲೇಸು ಸರ್ವೇಶ ॥೨೨೦॥

*   *   *

ನೆರೆಯವನ ಸಿರಿನೋಡಿ ।
ಕೊರಗಿದರೆ ಫಲವೇನು? ॥
ಹಿರಿಯದಿರೆ ಕುರುಬವನಿಂದ, ಅವನೆಯೇ ।
ಕರುಣಾಳು ವಲ್ತೆ? ಸರ್ವೇಶ ॥೨೨೧॥

*   *   *

ಸಲ್ಲಿಸಲು ಆಶೆಯನು ।
ನಿಲ್ಲದಲೆ ಬೆಳೆಯುವುದು; ॥
ಸಲ್ಲದಿರೆ ನರರ ಸುಡುವುದು; ಆಶೆಯನೆ ।
ಕೊಲ್ಲುವುದು ಲೇಸು ಸರ್ವೇಶ ॥೨೨೨॥

ಗಟ್ಟಿಹುರಿ ಆಕಾಶ ।
ಬುಟ್ಟಿಯನು ನೆಲಕೆ ಬಿಗಿ ॥
ದಿಟ್ಟಿಂತೆ, ಆಶೆಯು ಮೋಕ್ಷಗಾಮಿಯನು ।
ಕಟ್ಟುವುದು ಇಹಕೆ ಸರ್ವೇಶ ॥೨೨೩॥

*　　*　　*

ಭಂಗಾರ ಸೂಳೆಯರ ।
ಸಂಗೀತ ವಿಟಜನರ ॥
ಸಂಗಕ್ಕೆ ಕಾರಣವಕ್ಕು; ಅವರಿಂದ ।
ಮಿಂಗಡವೆ ಲೇಸು ಸರ್ವೇಶ ॥೨೨೪॥

ಕೆಟ್ಟವಳ ಕೂಡಾಡಿ ।
ಇಟ್ಟ ಹಣ ಈಡಾಡಿ ॥
ಬಟ್ಟೆ ಬಯಲಾಗು ದೇತಕೆ? ಕೆಟ್ಟವಳ ।
ದಿಟ್ಟಿಪುದೆ ಬೇಡ ಸರ್ವೇಶ ॥೨೨೫॥

ಪಟ್ಟೆಯುಟ್ಟವಳನ್ನು ।
ದುಷ್ಟಜನ ಕೆಣಕುವರು ॥
ದೃಷ್ಟಿಯನು ಸೆಳವ ಹಣ್ಣನು ಮಂಗಗಳು ।
ಬಿಟ್ಟಿಹವೆ ವನದಿ? ಸರ್ವೇಶ ॥೨೨೬॥

ಪುಂಡಾಟದಲಿ ಬಿದ್ದು ।
ಬಂಡಾಟ ಪಡಲೇಕೆ? ॥
ತಿಂಡಿಯನು ಬಯಸಿ ದೊಡ್ಡಿಯ ಸೇರುವಾ ।
ಭಂಡ ದನದಂತೆ ಸರ್ವೇಶ ॥೨೨೭॥

ಜಾರೆಬಳಿ ಸಾರಿದರೆ ।
ಜಾರುವುವು ನೀತಿಗಳು ; ॥
ಸೇರಿದ್ದ ಧನ ಕ್ಷಯಿಪುದು ; ತನ್ನಸುವೆ ।
ಹಾರಿ ಹೋಗುವುದು ಸರ್ವೇಶ ॥೨೨೮॥

ಹತ್ತಿದರೆ ಬಲುಮೋಹ ।
ಕುತ್ತಕ್ಕೆ ಎಡೆಯುಹರು ॥
ತುತ್ತಹರು ಜವದೆ ಜವಂಗೆ; ಮೋಹವನೆ ।
ಕತ್ತರಿಸೆ ಲೇಸು ; ಸರ್ವೇಶ ॥೨೨೯॥

ಮೋಹಹೇತುವು ರೂಪು ; ।
ಮೋಹದಿಂ ಮೇಹರುಜೆ; ॥
ಮೋಹದಿಂ ಅಂಗಭಂಗವು; ಇಳಿಯಳಿದ ।
ಮೋಹವೇ ಮೇಹ, ಸರ್ವೇಶ ॥೨೩೦॥

ವಿಷಯದಿಂ ಧನಧಾನ್ಯ ।
ಅಸಮವೀರ್ಯಾದಿಗಳು ॥
ಮುಸುಳುವವು; ಅಶನಕ್ಕಿಲ್ಲದಂತಹುದು ; ।
ವಿಷಯವೇ ವಿಷವು ಸರ್ವೇಶ ॥೨೩೧॥

ನಿಷಿದ್ಧ ಪದ್ಧತಿ

ಉಡಿಸದದು ವಸನವನು- ।
ಬಿಡಿಸುವುದು ಅಶನವನು ॥
ನುಡಿಸುವುದು ಸುಳ್ಳ, ಕೆಡಿಪುದು ಧರ್ಮವನು, ।
ಕಡುಲೋಭ ತಾನು ಸರ್ವೇಶ ॥೨೩೨॥

ಗಣಪದವ ಧಿಕ್ಕರಿಸಿ ।
ಗುಣಗಣವ ಕತ್ತರಿಸಿ ॥
ಹಣದೊಡನೆ ಮನುಜತ್ವವನೆ ಹೂಳುವುದು ।
ಹಣದಾಶೆ ಜಗದೆ ಸರ್ವೇಶ ॥೨೩೩॥

ಹಣತನಗೆ ಆಳಾಗೆ ।
ಗುಣವಂತ ನೆನಿಸುವನು ॥
ಹಣದಾಳೆ ತಾನಾದಂದು ಹಾಳಹನು, ।
ಹಣಕ್ಕೆಣೆಯಹನು ಸರ್ವೇಶ ॥೨೩೪॥

ಇಂದೊ ನಾಳೆಯೊ ಮೃತಿ ।
ಹೊಂದುವುದ ತಿಳಿತಿಳಿದು ॥
ಮಂದಿಯನು ಇರಿದೋ ತಿರಿದೊ ಕೂಡಿಡುವ ।
ದಂದುಗವದೇಕೆ? ಸರ್ವೇಶ ॥೨೩೫॥

ಕಾಸಿಗಾಶಿಪುದಲ್ಲ, ।
ಕಾಸಿಂಗೆ ಮೋಸಗಳು, ॥
ಮೋಸಕ್ಕೆ ವೇಷ, ವೇಷಕೆ ದೈನ್ಯಾದಿ ।
ದೋಷಗಳು ಬಹವು ಸರ್ವೇಶ ॥೨೩೬॥

ಬಿಕನಾಸಿಯು ಜೀನನ ।
ರೊಕ್ಕಕ್ಕೆ ಹೋರಿದರೆ, ॥
ಇಕ್ಕಳವು ತಂಡಸದೊಡನೆ ತೆಕ್ಕೈಸಿ ।
ತಿಕ್ಕಾಡಿದಂತೆ ಸರ್ವೇಶ ॥೨೩೭॥

*   *   *   *

ದುರಾಶೆಯೆ ತಾಯ್ಬೇರು ; ।
ಪರಾಭವ ಪರಾಶ್ರಯ ॥
ಸಿರಿಯುಫಲ ನಳಧರ್ಮಜರ ಜೂಜಿಂಗೆ ; ।
ತರವಲ್ಲ ಜೂಜು ಸರ್ವೇಶ ॥೨೩೮॥

*　　*　　*　　*

ಜೇನಿಗಿಂ ಬೇರೆಯದು ।
ತಾನೆಂತು ಸಿಹಿಯಿರಲು, ॥
ನಾನೆಂಬ ನುಡಿಯು ಅದಕಿಂ ಸಿಹಿಯಾಗಿ ।
ಕಾಣುವುದು ಜನಕೆ ಸರ್ವೇಶ ॥೨೩೯॥

ತನ್ನೊಲುಮೆ ತನ್ನಲ್ಲಿ ।
ಚನ್ನಾಗಿ ತುಂಬಿರಲು ॥
ಸನ್ನುತನ ಒಲುಮೆಗೆ ಇನ್ನು ಎಡೆಯುಂಟೆ ? ।
ಮುನ್ನ ಸರಿಗೊಳಿಸೊ ಸರ್ವೇಶ ॥೨೪೦॥

ನಿನ್ನಂತೆ ನಾನೆನದೆ ।
‘ ನನ್ನಂತೆ ನೀನಿರುವೆ ’ ॥
ಎನ್ನುತ್ತ ಪರರಲಿ ಹೊಂದಿ ನಡೆವಾತ ।
ಮನ್ನಣೆಗೆ ಪಾತ್ರ ಸರ್ವೇಶ ॥೨೪೧॥

ಹೆಚ್ಚು ನಾನೆನ್ನುವುದು ।
ನೆಚ್ಚಿದ್ದ ಮೋಕ್ಷಕ್ಕೆ ॥
ಕಿಚ್ಚಿಕ್ಕಿದಾ ತೆರನಕ್ಕು ; ಮೊದಲಲ್ಲೆ ।
ನಚ್ಚು ಬಗೆಹರಿಸೊ ಸರ್ವೇಶ ॥೨೪೨॥

ದುರಿತವನು ನೀಗಿಸಲು ।
ಪರಹಿತವ ಸಾಗಿಸಲು ॥
ಇರದೆ ನಾ ನೆನ್ನಿಸು ; ಬರಿಯ **ಅಹಂತ್ವವು** ।
ದುರಿತ ಬೀಜವ್ಮೆ ಸರ್ವೇಶ ॥೧೪೩॥

ತಾನು ಬೇರೆನ್ನುವುದು ।
ಹೀನತನ ; ನೋವಾಂತ ॥
ಮಾನವನೆ ತಾನೆನ್ನುವಾ ಭಾವನೆ ।
ಜ್ಞಾನ ಮೂಲವದು ಸರ್ವೇಶ ॥೧೪೪॥

*   *   *   *

ಕಣ್ಣನ್ನು ಕಳಕೊಂಡು ।
ಸನ್ನೆಗೋಲರಸುವೊಲು ॥
ತನ್ನವರ ಮತವನು ತೊರೆದು ತಿರಿಯುವರೆ ।
ಅನ್ಯಧರ್ಮವನು ? ಸರ್ವೇಶ ॥೧೪೫॥

ಸುತ್ತಲೂ ಕದಮುಚ್ಚಿ ।
ಎತ್ತಣದೊ ಮೇಣದಾ ॥
ಬತ್ತಿಯನು ಹುಡುಕುವರಂತೆ ಪರಧರ್ಮ ।
ದತ್ತಸಾರುವರೆ ? ಸರ್ವೇಶ ॥೧೪೬॥

ಮನಭೇದ ಮುಖದಂತೆ ।
ಮನದಂತೆ ಮತಭೇದ ॥
ಮನುಜತ್ವ ಒಂದೆಯೆ ಇರಲು, ಗುರಿಯೆಲ್ಲ ।
ಕೊನೆಗೆ ಒಂದಕ್ಕು ಸರ್ವೇಶ ॥೧೪೭॥

ಶಠಭಾವ, ಸಟೆವಾತು, ।
ಕುಟಿಲ, ಕುಹಕಗಳನ್ನು ॥
ದಿಟವಾಗಿ ನೀಗಿ, ಮೋಕ್ಷಕೆ ಹೋರುವನೆ ।
ಹಠಯೋಗಿ ಎನಿಪ ಸರ್ವೇಶ ॥೨೪೮॥

ಕರ್ತವ್ಯ ಪದ್ಧತಿ

ಮುಂಚೆ ಕೆಲವರಿಗಿತ್ತು ।
ಹಂಚುವುದ ನೋಡಲ್ಕೆ ॥
ಹೊಂಚಿರಲು ನೀನು, ಜೀನನು ತನ್ನ ತಾ ।
ವಂಚಿಸಿಕೊಳುವನು ಸರ್ವೇಶ ॥೨೪೯॥

ದಾನಿಯದು ಬರಿಗಯ್ಯು ।
ಜೀನನದು ಹಿಡಿಗಯ್ಯು ॥
ದಾನಿ ತಾ ಪರದ ಬೊಕ್ಕಸ ತುಂಬುತಿರೆ ।
ಜೀನನದು ಬರಿದು ಸರ್ವೇಶ ॥೨೫೦॥

ಮನುಜರನು ಅಳಿಸುತ್ತ ।
ಅನುದಿನವು ಗಳಿಸುತ್ತ ॥
ಉಣದುಡದೆ ಇಟ್ಟು ಮಡಿಯುುವ ಜಿಪುಣಂಗೆ ।
ಪುಣ್ಯವೆಲ್ಲಿಯದು ? ಸರ್ವೇಶ ॥೨೫೧॥

ಫಲಬಯಸಿ ಇತ್ತದ್ದು ।
ಒಲುಮೆಯಾ ದಾನಲ್ಲ; ॥
ಬಲುಮೆಯಾ ಸಾಲ; ನಿಷ್ಕಾಮತ್ಯಾಗ ।
ಫಲಿಸುವುದು ಪರದೆ ಸರ್ವೇಶ ॥೨೫೨॥

ಇಟ್ಟದ್ದು ಪರಗಕ್ಕು ।
ಕೊಟ್ಟದ್ದು ಪರಕಕ್ಕು ॥
ಇಟ್ಟಧನಕಿಂತಲು ಕೊಟ್ಟ ಕಾಸಕ್ಕು ।
ಗುಟ್ಟಾದ ನಿಧಿಯು ಸರ್ವೇಶ ॥೨೫೩॥

ಹಾಡಲೀವುದು ಕೂಲಿ; ।
ಕಾಡಲೀವುದು ದಂಡ; ॥
ಬೇಡಲೀವುದು ಮಧ್ಯಮವು; ತಾನಾಗಿ ।
ನೀಡುವುದೆ ಶ್ರೇಷ್ಠ ಸರ್ವೇಶ ॥೨೫೪॥

ವಿತ್ತದಾ ಬಸುರಿನಲಿ ।
ಹೆತ್ತಿಹರೆ ತನ್ನನ್ನು? ॥
ಸತ್ತಂದು ತಾನು ವಿತ್ತವನೊಯ್ಯುವನೆ?
ಇತ್ತುದೇ ಬುತ್ತಿ ಸರ್ವೇಶ ॥೨೫೫॥

*   *   *   *

ಹಿತವೆಸಗೆ ನಿಜಸುತಗೆ ।
ಅತಿಶಯವೆ? ಕೋಗಿಲೆಯ ॥
ತತ್ತಿಯನು ಕಾಗೆ ಪೊರೆದೊಲು ತಬ್ಬಲಿಗೆ ।
ಗತಿಯಾಗಬೇಕು ಸರ್ವೇಶ ॥೨೫೬॥

ಹೊಣೆಯಾಗಿ ಪರಸ್ಪರ ।
ಅಣಿಯಾಗಿ ಬಾಳಲ್ಕೆ ॥
ಗುಣಧನಾದಿಯುಲೊಂದೊಂದ ನೊಬ್ಬಂಗೆ ।
ಹಣ್ಣಿರುವೆ ಬಿಡಿಸಿ ಸರ್ವೇಶ ॥೨೫೭॥

ತುರಿಗಾಯಿ, ಮರಮುಟ್ಟು ।
ಹುರಿನಾರು, ಗರಿಗೊಪ್ಪ ॥
ತರತರದ ಕೆಲಸಕೆ ತೆಂಗು ಬರುತಿರಲು ।
ನರನಾರಿಗಹನು ? ಸರ್ವೇಶ ॥೨೫೮॥

ನೆಲ್ಲಕ್ಕು ಜನಗಳಿಗೆ; ।
ಹುಲ್ಲಕ್ಕು ದನಗಳಿಗೆ; ॥
ಜಳ್ಳಕ್ಕು ಒಲೆಯುರಿಪುದಕೆ; ಆವುದಕು ।
ಇಲ್ಲ ಮಾನವನು ಸರ್ವೇಶ ॥೨೫೯॥

ಜನರೆಲ್ಲ ನಗುತಿರಲು ।
ಜನನದಲೆ ನಾನತ್ತೆ ; ॥
ಜನಹಿತವ ಗೈಸಿ ಬಾಳಿಸೊ; ಮಡಿವಲ್ಲಿ ।
ಜನರಳಲಿ ನನಗೆ ಸರ್ವೇಶ ॥೨೬೦॥

*   *   *   *

ಕೂರೆಯನು ಹೇನನ್ನು ।
ಸೀರಿತಾ ಕೊಲ್ಲದಲೆ, ॥
ದೂರಕ್ಕೆ ತೂರಿದರಲ್ಲೆ ಸಾಯವೇಂ ? ।
ಆರಿಗಾಪಾಪ? ಸರ್ವೇಶ ॥೨೬೧॥

ಚೇಳೇನ ಮಾಡೀತು ।
ಮುಳ್ಳನ್ನು ಈಡಾಡೆ ? ।
ಖೂಳನನು ಹೊಡೆದು ಬಡಿದರೆ ಫಲವೇನು ? ।
ಚಾಳಿ ಬಿಡಿಸುವುದು; ಸರ್ವೇಶ ॥೨೬೨॥

ಜೀವಿ ತನ್ನವನಲ್ಲ ।
ಜೀವನಕೆ ತಾನಲ್ಲ; ॥
ದೇವನದು ಜೀವ; ಜೀವಿಯ ನೋಯಿಸಲು ।
ದೇವ ನೋಯುವನು, ಸರ್ವೇಶ ॥೧೬೩॥

ಬಲಿಯಿಾಯೆ ಕರುಣಾಳು ।
ಒಲಿಯುವನೆ? ಕೊಲೆ ಹಿತವೆ ॥
ಸಲಹುವಗೆ? ಪಾಪಿಯ ಹೊಲಸು ಪೂಜೆಯಿಂ ।
ಫಲಿಸುವುದೆ ಮೋಕ್ಷ? ಸರ್ವೇಶ ॥೧೬೪॥

*　　　*　　　*　　　*

ಮಡಿವನಕ ಹೃದ್ಯಂತ್ರ ।
ನಡೆಯುತಿರೆ ಕರ್ಮಕ್ಕೆ ॥
ಬಿಡುವುಂಟೆ? ಫಲದಾಶೆಯನು ತೊಡೆಯುತ್ತ ।
ತೊಡಗಲೇ ಬೇಕು ಸರ್ವೇಶ ॥೧೬೫॥

ಶ್ರುತಿಕರ್ಮವಿರಬೇಕು; ।
ಹಿತಜ್ಞಾನವು ಬೇಕು; ॥
ಅತಿತರ್ಕವುಳಿದು ಎರಡನು ಹೊಂದಿಪನೆ ।
ಮತಿವಂತನಹನು ಸರ್ವೇಶ ॥೧೬೬॥

*　　　*　　　*　　　*

ಪಂಚೇಂದ್ರಿಯಂಗಳು ।
ವಂಚನೆಯ ಮಾಡುತ್ತ ॥
ಪಂಚವಿಧ ಪಾತಕ ಗೈಸಿ ಜನರಿಂದ ।
ಮಿಂಚಿಪುವು ಗತಿಯ ಸರ್ವೇಶ ॥೧೬೭॥

ಒಂದೊಂದು ಅವಯವವು ।
ಒಂದೊಂದ ಬಯಸುವುದು ॥
ಬಂಧಿಸಲು ಇಂದ್ರಿಯಗಳನು, ನಿಜಭೋಗ ।
ಸಂದಂತೆ ಅಹುದು ಸರ್ವೇಶ ॥೨೬೮॥

ಕಾಡು ಕುದರೆಗಳೈದ ।
ಹೊಡುತ್ತೆ ಕಡಿವಾಣ ॥
ಜೋಡಿಸದೆ ಓಡಿಸಿದಂತೆ, ಇಂದ್ರಿಯವು ।
ಜಾಡ ಮೀರುವುದು ಸರ್ವೇಶ ॥೨೬೯॥

ಗುಡಿಗುಹೆಯ ಲಿರಲೇಕೆ? ।
ಉಡಲೇಕೆ ಕಾವಿಯನು? ॥
ತೊಡಕೊಳ್ಳಲೇಕೆ ಬೂದಿಯ? ಕಾಮನನು ।
ಸುಡುವುದೇ ಲೇಸು, ಸರ್ವೇಶ ॥೨೭೦॥

ಅರಿತವನ ಮುಂದೊಂದು ।
ಅರಿಯದನ ಮುಂದೊಂದು ॥
ತೆರದ ನಡೆನುಡಿಯು ಇಂದ್ರಿಯದಾಸಂಗೆ ।
ನಿರುತ ಇಹವಯ್ಯ ಸರ್ವೇಶ ॥೨೭೧॥

ಧ್ಯಾನಪದ್ಧತಿ

ಫಲಕರ್ಮಗಳ ಕೂಟ, ।
ಚಲಗೋಳಗಳ ಓಟ, ॥
ಫಲಾದಿಯ ಮಾಟ, ಒಬ್ಬನದಲ್ಲದಲೆ ।
ಹಲಕಯ್ಯ ಹೊಲಸೆ? ಸರ್ವೇಶ ॥೨೭೨॥

*   *   *

ಹೊಳೆಯೊಳಗ ತಂಬಿಗೆಯು ।
ಒಳಹೊರಗೆ ತುಂಬುವಾ ॥
ಜಲದಂತೆ ದೇವಾಂಶವದು ಎಡೆಬಿಡದೆ ।
ಇಳೆಯ ತೀವಿಹುದು ಸರ್ವೇಶ ॥೨೭೩॥

ಬಲ್ಲುದೇ ಉಣ್ಣಿ ತಾ ।
ನೆಲ್ಲುಗೋಗಾತ್ರವನು ? ॥
ಸಲ್ಲುವುದೆ ವಿಶ್ವರೂಪಿಯ ದರ್ಶನವು ।
ಹುಲ್ಲು ಮಾನವಗೆ ? ಸರ್ವೇಶ ॥೨೭೪॥

ಹಿಂಡಿನೊಳು ತಾಯನ್ನೆ ।
ಕಂಡರಿವ ಮರಿಯಂತೆ ॥
ತಿಂಡಿಯನಿರುವೆ ಕುರಿವಂತೆ ನಿನ್ನನಾ ।
ಕಂಡುಕೊಳೆ ಕಲಿಸೊ ಸರ್ವೇಶ ॥೨೭೫॥

ಇನ್ನಿನ್ನು ಪಾಪದಲಿ ।
ಬನ್ನಬಡುವುದ ಬಿಡಿಸಿ, ॥
ಮುನ್ನಿನದ ಮನ್ನಿಸಿ, ಪೊರೆಯೊ ಕರುಣದಲಿ ; ।
ನಿನ್ನ ನಂಬಿಹೆನು ಸರ್ವೇಶ ॥೨೭೬॥

* * *

ಗೋವನ್ನು ನಂಬಿದರೆ ।
ಜೀವನಕೆ ಹಯನುಂಟು ; ॥
ದೇವನನು ನಂಬಲು, ಇಹದ ಸುಖವುಂಟು ।
ಕೈವಲ್ಯವುಂಟು ಸರ್ವೇಶ ॥೨೭೭॥

ಮೊದಲಲ್ಲಿ ತಿರುಳಿಲ್ಲ; ।
ತುದಿಯಲ್ಲಿ ಹುರುಳಿಲ್ಲ; ॥
ಹದಗಾಲದಲಿಲ್ಲ ಬಿಡುವು; ಶಿವಪೂಜೆ ।
ಮುದದಿನಾವಾಗ? ಸರ್ವೇಶ ॥೨೭೮॥

ಭಾವಶುದ್ಧಿಯಿಲ್ಲದೆ ।
ದೇವತಾರ್ಚನೆ ಯೇಕೆ? ॥
ಕಾವಾಗ ಕಿಲುಬುವ ಪಾತ್ರೆಯೊಳಡುವರೆ ।
ಸೇವಿಗೆಯು ಕೀರ? ಸರ್ವೇಶ ॥೨೭೯॥

ಕಂಡೆಲ್ಲ ದೈವವನು ।
ಭಂಡನರ್ಚಿಸಲೇನು? ॥
ಉಂಡಾವೆ ಅಡುವಕೈಗಳು? ಸಂಸ್ಕಾರ ॥
ದಂಡಿ ಯಿರಬೇಕು ಸರ್ವೇಶ ॥೨೮೦॥

ಅನುದಿನವು ಸಕಲವನು ।
ನನಗೀವ ನಿನ್ನ್ನಯಾ ॥
ಅನುರಾಗಕೆನ್ನ ಕಾಣಿಕೆ ಭಕ್ತಿಯಿಂ ।
ನೆನೆಯುವುದೆ ಅಲ್ತೆ? ಸರ್ವೇಶ ॥೨೮೧॥

*   *   *

ಸರ್ವವನು ನೀ ಸೃಜಿಸಿ ।
ಸರ್ವದಲು ನೀನಿರಲು ॥
ಸರ್ವಕ್ಕು ಜಗದಿ ನಿನ್ನನೆ ಹೋಲಿಪರು ।
ನಿರ್ವಿಣ್ಣಜನರು ಸರ್ವೇಶ ॥೨೮೨॥

ದೇವನಾ ಕೈಬಿಟ್ಟು ।
ಕಾವನಾ ಕೈಬಿಟ್ಟು ॥
ಓವಿದಾ ತಾಯನು ಬಿಟ್ಟು ಸಿಕ್ಕಿದಕೆ ।
ಗಾವಿಲನು ನಮಿಪ ಸರ್ವೇಶ ||೨೮೩||

ನೋಡದಿಹ ನಿನ್ನನ್ನು ।
ಮಾಡಲ್ಕೆ ಭಯವಿಲ್ಲ; ॥
ರೂಢಿಯಾ ಮೂರ್ತಿಯ ಮನಕೆ ಬಂದಂತೆ ।
ಮಾಡಿ ನೀಡಿಹರು ಸರ್ವೇಶ ||೨೮೪||

ಬಡಶಿಲ್ಪಿ ಕೊಟ್ಟುದೆ ।
ಒಡೆಯಂಗೆ ರೂಪಕ್ಕು ॥
ಬಡಗಿ ಮನಮಾಡೆ ಪೂಜೆಯು ಸಲ್ಲುವುದು ।
ಅಡವಿಮೃಗಕೆಲ್ಲ ಸರ್ವೇಶ ||೨೮೫||

ಹರಿ ಬೇಕು, ಹರ ಬೇಕು ।
ತರತರದೆ ಇರಬೇಕು ॥
ಪರಿಪರಿಯ ಜನಕೆ, ನೋಡಲು ಚಿದ್ರೂಪಿ ।
ಧರೆಗೆಲ್ಲ ಸಾಕು ಸರ್ವೇಶ ||೨೮೬||

ಗುರುಮಹಿಮಾಪದ್ಧತಿ

ಅರಿವಿನಲಿ ಇರುವಿನಲಿ ।
ತರತಮವು ಇರದಿರಲು ॥
ಗುರುಶಿಷ್ಯ ಬಡವ ಬಲ್ಲಿದ ರಿಹರೆಂತು ।
ಧರೆಯ ಜಂಜಡದೆ ? ಸರ್ವೇಶ ||೨೮೭||

ಆಡುವಾಗ ಧಾನ್ಯಗಳು ।
ಗಡಿಗೆಯಲಿ ಉಡುಗಿದ್ದು ॥
ಕಡುಭೋಗ್ಯ ವಹಂತೆ ಆಡಗಿ ಗುರುಕೃಪೆಯು ।
ಪಡೆಯುವುದು ಯೋಗ್ಯ ಸರ್ವೇಶ ॥೨೮೮॥

ಉಚ್ಚ್ಯಗುರುಬೋಧೆಯಾ ।
ಸ್ವಚ್ಛಸುಧೆ ದೊರಕುವುದು ॥
ಇಚ್ಛೆಯಾ ಶಿಷ್ಯನೆಂಬಾ ನಂದಿನಿಗೆ ।
ಮೆಚ್ಚಿಸಲು ಗುರುವ ಸರ್ವೇಶ ॥೨೮೯॥

ಶರಣರಲಿ ಬೆರೆದಿರುವ ।
ನರರನ್ನು ದುರಿತಗಳು ॥
ಇರಿದಾವೆ? ತುಂಬುಗೆರೆಯಾ ಜಲಚರಕೆ ।
ಇರುವುದೇ ದಾಹ? ಸರ್ವೇಶ ॥೨೯೦॥

ಸುರನದಿಯು ಮೇಲ್ಹೊಳೆಯು ।
ಶರಣಜನ ಒಳಕೊಳೆಯು ॥
ಹರಿಸುತಿರೆ, ಸಕಲ ನದಿಗಳ ಜಳಕಕೂ ।
ಗುರುಕೃಪೆಯೆ ಹಿರಿದು ಸರ್ವೇಶ ॥೨೯೧॥

ಎಲ್ಲಮೃಗ ಬಿಗಿಬಲ್ಲ ।
ಬಲ್ಲಿದನು ನಿಜಮನವ ॥
ನಿಲ್ಲಿಪನೆ ಶಿವನಡಿಯಲ್ಲಿ ಗುರುಶಿಕ್ಷೆ ।
ಸಲ್ಲುವಾ ಮೊದಲೆ? ಸರ್ವೇಶ ॥೨೯೨॥

ಮೊದಲಲ್ಲೆ ಗುರುಕೃಪೆಯು ।
ಹದಗೊಳದೆ ಪರಮಪದ ॥
ಒದಗುವುದೆ? ಗೋಪುರ ತಾನೆ ನಿಂತೀತೆ ।
ಹದಿಯದಲೆ ಹದಿಯ ಸರ್ವೇಶ ॥೨೯೩॥

ಪತಿಯೊಲುಮೆ ತಪ್ಪಿದಾ ।
ಸತಿಗೆನಿತು ನಗವಿರಲು ॥
ಹಿತವಹುದೆ? ಸಕಲವು ಇದ್ದು ಗುರುಬಿಟ್ಟ ।
ಗತಿಯುಂಟೆ ನರಗೆ? ಸರ್ವೇಶ ॥೨೯೪॥

ನೇತ್ರಗಳು ದೀಪಿರದೆ ।
ರಾತ್ರಿಯಲಿ ಕಾಣಿಸವೆ? ॥
ಸೂತ್ರಗಳು ಸೂಚಿಪ ಶಿವನ ಗುರುಮೂರ್ತಿ ।
ಮಾತ್ರ ತೋರಿಪನು ಸರ್ವೇಶ ॥೨೯೫॥

ಸುಗುಣವನು ಗುರು ಕಲಿಸೆ ।
ಸುಗುಣಿಗಳನಾಳುವುದು ॥
ಸುಗಮವದು; ಆದರಿಂ ದೊರೆಗೆ ಗುರುಕುಲವು ।
ಮಿಗಿಲು ಸಹಕಾರಿ ಸರ್ವೇಶ ॥೨೯೬॥

ವರಪದವ ಗುರುಕರುಣೆ ।
ಕರುಣಿಪುದು; 'ಗುರು'ಪದದ ॥
ಪರವರ್ಣವೊಂದೆಯೆ ಜನಕೆ ಬಹುತ್ವದ ।
ಗುರುತ್ವವ ಕೊಡದೆ? ಸರ್ವೇಶ ॥೨೯೭॥

ಮರವಿರದೆ ಕಾಡಹುದೆ? ।
ನರರಿರದೆ ನಾಡಹುದೆ? ॥
ವರನಿರದೆ ಮದುವೆಯೆ? ಧುರವೆ ಬಲವಿರದೆ? ।
ಗುರುವಿರದೆ ಪರವೆ? ಸರ್ವೇಶ ॥೧೯೮॥

*　　*　　*

ಅಧ್ಯಾತ್ಮ ಪದ್ಧತಿ

ಮೊಗ್ಗುಗಳೆ ಫಲವಹುವೆ ।
ಬಗ್ಗನೆಯೆ ಹೂ, ಹೀಚು, ॥
ಜಗ್ಗುವಾ ಕಾಯಾಗದಲೆ? ಹಂತಗಳು ।
ಸಗ್ಗಕೂ ಉಂಟು ಸರ್ವೇಶ ॥೧೯೯॥

ಮುತ್ತಂತೆ ಕಣ್ಣಿದು ।
ಕತ್ತಲಲಿ ಕಾಣುವುದೆ? ॥
ಉತ್ತಮನ ನೋಡೆ ಒತ್ತಾಸೆಯುಪ್ಪುದೆ? ।
ಚಿತ್ತತ್ವ ನೀಡೊ ಸರ್ವೇಶ ॥೨೦೦॥

ಅರಿಯಲ್ಕೆ ದೀಪವನು? ।
ಇರಬೇಕು ಕಣ್ಣುಗಳು ॥
ಪರಮಾತ್ಮ ದರ್ಶನಕಾಗಿ ಆತ್ಮನನು ।
ಅರಿಯಲೇ ಬೇಕು ಸರ್ವೇಶ ॥೨೦೧॥

ತನ್ನಿರವ ತಿಳಿಸುವುದು ।
ತನ್ನಘವ ಹರಿಸುವುದು ॥
ತನ್ನರಿಗಳಿಂದ ಮನ್ನಣೆ ತರಿಸುವುದು ।
ಉನ್ನತಜ್ಞಾನ ಸರ್ವೇಶ ॥೨೦೨॥

ಕುರಿಮರಿಯ ಕಂಕುಳಲಿ ।
ಇರುಕಿದ್ದು ಎಲ್ಲೆಲ್ಲು ॥
ಅರಸುತಿಹ ಕುರುಬನ ತೆರದೆ ಪರಮನನು ।
ಹೊರಗೆ ಹುಡುಕುವರೆ? ಸರ್ವೇಶ ॥೩೦೩॥

ಅಡವಿಮೃಗ ಕಸ್ತೂರಿಯು ।
ಅಡಗಿಹುದ ಅರಿಯದೊಲು ॥
ಮೃಡನನ್ನು ನಿನ್ನಲೆ ಅರಿಯಲರಿಯದಲೆ ।
ಹುಡುಕುವರೆ ಹೊರಗೆ? ಸರ್ವೇಶ ॥೩೦೪॥

ತಂಗಿರಲು ನಿನ್ನಲ್ಲೆ ।
ಸಿಂಗರದ ಮೂರುತಿಯು ॥
ತೆಂಕ ಬಡಗವೆಲ್ಲ ಅವನ ಹುಡುಕುತ್ತ ।
ಭಂಗ ಬಡುವರೇ ? ಸರ್ವೇಶ ॥೩೦೫॥

ಕ್ಷೀರದೊಳು ತುಪ್ಪವನು, ।
ನೀರಿನೊಳು ಉಪ್ಪನು, ಶ- ॥
ರೀರದೊಳು ಆತ್ಮನಿಹುದನು, ಗಾಳಿಯನು ।
ನೇರ ನೋಡೇವೆ? ಸರ್ವೇಶ ॥೩೦೬॥

ಇಳೆಯೊಳಗೆ ಇರುತಿರ್ಪ ।
ತಿಳಿಗೊಳದಿ ರವಿಬಿಂಬ ॥
ಹೊಳೆವಂತೆ, ಸುಶಾಂತರೊಳಗೆ ದೇವಕಳೆ ।
ಥಳಥಳಿಕು ತಿಳಿಯೆ ಸರ್ವೇಶ ॥೩೦೭॥

ಚಿತ್ತವಿರೆ ನಾಯ್ಗಳಿಗೆ ।
ತತ್ತರಿಪೆವೆ? ಬ್ರಹ್ಮಾಂಡ ॥
ವೃತ್ತವನು ಸೀಳಿ ತಿಳಿವಾ ಪ್ರಾಜ್ಞನಿಗೆ ।
ಎತ್ತಣದು ಭಯವು? ಸರ್ವೇಶ ॥೩೦೮॥

ಇಹಪರವು ಎರಡೂರು ।
ಬಹುಭೇದವವುಗಳಿಗೆ ॥
ಇಹದಕಡೆ ಸಾರಲು ಪರವು ದೂರಹುದು ।
ವಿಹಿತಪಥ ಹಿಡಿಸೊ ಸರ್ವೇಶ ॥೩೦೯॥

ಪರದ ರುಚಿ ತಿಳಿದಾತ ।
ಕುರಿಯುವನೆ ಇಹಸುಖವ? ॥
ನೊರೆಹಾಲ ತೊರೆವರೆ ಬದಿಯ ನೀರ್ಬಯಸಿ?
ಪರಕ್ಕೆಣೆಯುಂಟೆ? ಸರ್ವೇಶ ॥೩೧೦॥

*   *   *

ವೇದ ವೇದಾಂಗಗಳ ।
ಓದಿದರು ಫಲವೇನು? ॥
ದೂದಿಯಾ ಬೂದಿ ಪೊಲಕ್ಕು ಅದ್ವೈತ ।
ಸಾಧಿಸದೆ ಬಿಡಲು ಸರ್ವೇಶ ॥೩೧೧॥

ಇರುವಿಕೆಯ ಹೆದ್ದೊರೆಗೆ ।
ನರನಕ್ಕು ಕಿರಿತೆರೆಯು ॥
ತೊರೆವೆರೆತ ಏರು ಇಳಿತವ ಹೊಂದಿಹುದು ।
ನರನ ಸುಖದುಃಖ ಸರ್ವೇಶ ॥೩೧೨॥

ಎಳೆಯಂದು ನೆಲದ ಹುಳು ।
ಬಲಿತು ಖಗ, ಕೆಲೆತು ಮಿಕ ॥
ಒಲಿದು ಸುರ, ಸತ್ತುಮೃತ್ತಿಕೆ-ಎಲ್ಲವೂ ।
ಇಳೆಯೊಳಗೆ ನಾನೆ ಸರ್ವೇಶ ॥೩೧೩॥

* * *

ವೃಕ್ಷಕ್ಕೆ ಜಲವೀವ ।
ಪಕ್ಷಿಂಗೆ ಫಲವೀವ ॥
ಕುಕ್ಷಿಯಲೆ ಶಿಶುವ ರಕ್ಷಿಪ ಜಗದೀಶ ।
ಲಕ್ಷಿಸನೆ ನನ್ನ ಸರ್ವೇಶ ॥೩೧೪॥

ಭಾವಭಕ್ತಿಯಿಂದಲಿ ।
ನೋವನ್ನು ಹಿತವನ್ನು ॥
ದೇವನಿಗೆ ಬಿಟ್ಟರೆ-ತಾಯ ನಂಬಿದರೆ ।
ಆವ ಭಯವಯ್ಯ? ಸರ್ವೇಶ ॥೩೧೫॥

* * *

ಉಪಸಂಹಾರ

ಕೋಟಿಶತ ಮಳೆವಿಲ್ಲು ।
ಜೇಟಿಗೂ ದೊಂಬನಾ ॥
ಆಟಕ್ಕೆ ಸಲುವುದೆ? ಪರಕೆ ಮಿಥ್ಯೆಯಾ ।
ನೋಟ ಸಾಧನವೆ? ಸರ್ವೇಶ ॥೩೧೬॥

ದೇಹವನು ದಂಡಿಸಲು ।
ಮೋಹ ತಾ ಅಳಿಯುವುದು; ॥
ಮೋಹ ಬಿಡೆ ಯೋಗ ಸಿದ್ಧಿಯು; ಯೋಗದಾ ।
ಸಾಹಸವೆ ಮೋಕ್ಷ ಸರ್ವೇಶ ॥೩೧೭॥

ಅರಿಷಟ್ಕವತರಿಯಿಸೊ ।
ವರಶಮಾಧಿಯ ತೊಡಿಸೊ ॥
ಪರನೆಂಬುವಾತನು ನಾನೆಯೆಂದರಿಸೊ ।
ಮರೆಸದಿರೊ ನಿನ್ನ ಸರ್ವೇಶ ॥೨೧೮॥

ಗುಂಡಿಗೆಯ ಗೂಡಿನಲಿ ।
ಮುಂಡಿಸಿಹ ಜೀವಾತ್ಮ ॥
ಭಂಡತನ ಬೇಡೆನುತಿಹುದ ಮನ್ನಿಪುದ ।
ಖಂಡಿತದೆ ಕಲಿಸೊ ಸರ್ವೇಶ ॥೨೧೯॥

ಮಾನವರು ತಮತಮಗೆ ।
ನಾನು ನಾ ನೆನುತಿಹೆವು ॥
ನಾನೆಂಬುದನ್ನು ತಪ್ಪಿಸೊ; ನಿನ್ನಂತೆ ।
ನಾನಾಗೆ ಕಲಿಸೊ ಸರ್ವೇಶ ॥೨೨೦॥

ಕನ್ನಡಿಗ ಜನಪತಿಗೆ ।
ಕನ್ನಡದ ಜನಪದಕೆ ॥
ಕನ್ನಡಿಗ ಕವಿಗೆ ।
ಕನ್ನಡ ಸಂಸ್ಕೃತಿಗೆ ।
ಮುನ್ನ ಜಯವಕ್ಕೆ ಸರ್ವೇಶ

Fragments of intellect are always good.

MME. DUDE VANT.

A careless song, with a little nonsense in it now and then, does not misbecome a monarch.

HORACE WALPOLE.

If a book come from the heart, it will contrive to reach other hearts; all art and author-craft are of small account to that.

THOMAS CARLYLE.

Is a book bad? Nothing can plead for it. Is it good? All the things cannot crush it.

VALTAIRE.

ಲಘು ಟಿಪ್ಪಣಿ.

[ಅಕಾರಾದಿ ಕ್ರಮವನ್ನು ಅನುಸರಿಸಿದೆ. ಆದರೆ, ಹೀಗೆ ವಿಂಗಡಿಸಿದ ಪದದ ಮುಂದೆಯೇ ಅದೇ ಪದ್ಯದ ಇತರ ಕ್ಲಿಷ್ಟಪದಗಳನ್ನೂ ಕೊಟ್ಟಿದೆ.]

ಅಘ—ಪಾಪ

ಅತಿತರ್ಕವುಳಿದು—ಹೆಚ್ಚು ಚರ್ಚೆ ಬಿಟ್ಟು

ಅನಲಸಖ—ಅಗ್ನಿಗೆ ಬೇಕಾದುದು, ಉರಿಯನ್ನು ಹೆಚ್ಚಿಸುವಂಥದು (ಆಕ್ಸಿಜರ್); ಸಲಿಲಕರ—ತೇವವನ್ನುಂಟುಮಾಡುವುದು, ನೀರಿಗೆ ಅಗತ್ಯವಾದುದು (ಹೈಡ್ರೋಜನ್).

ಅನಿಲಗಳು—(ಮೇಲ್ಕಂಡ) ವಾಯುಗಳು.

ಅರಿತಾತ—ಬಲ್ಲವನು; ಅರಿವು-ವಿದ್ಯೆಯು; ಅರಿಯಕ್ಕು-ಹಗೆಯಾಗುವುದು

ಅರಿವಿನಲಿ—ಜ್ಞಾನದಲ್ಲಿ; ಇರಿವಿನಲಿ-ಬಾಳಿನ ಅಂತರದಲ್ಲಿ.

ಅಶನ—ಆಹಾರ; ವಸನ-ವಸ್ತ್ರ.

ಅಳಿವುದಕೆ—ಸಾಯಲು, ಉಳಿವುದಕೆ-ಬದುಕಲು, ಚಿರಂಜೀವಿಯ—ಆತ್ಮನ.

ಅಳಿಸುವುದು—ನಾಶಮಾಡುವುದು, ಅಸು-ಜೀವ.

ಅಳಿವುಳಿವು—ಸಾವು ಬದುಕು.

ಆದಿತ್ಯ—ಸೂರ್ಯ, ಆದಿತೇಯರ-ದೇವತೆಗಳ.

ಇನಮಾನ—ಸೌರಮಾನ, ಶಶಿಮಾನ-ಚಾಂದ್ರಮಾನ, [ಮಹಮ್ಮದೀಯರು ಚಾಂದ್ರಮಾನವನ್ನು ಗುಣಿಸುವರು. ಮುವ್ವತ್ತುವರುಷ ಕ್ಕೊಮ್ಮೆ ಮೊಹರಂ ಮತ್ತು ರಾಮನವರಾತ್ರಿಗಳು ಸಂಧಿಸುವವು]

ಇರಿವರಾ ಮಾತಿಂಗೆ—ಕಡಿಯುವರ ನುಡಿಗೆ (ಕನ್ನಡಕ್ಕೆ ಹಾನಿತರುವ ಭಾಷೆಗೆ).

ಇರುವಿಕೆಯು—ಬಾಳ್ವಿಕೆಯೆಂಬ, ಹೆದ್ದೊರೆಯ-ಪ್ರವಾಹದ, ತೊರೆವೆರೆದ-ಅಲೆಯೊಡನೆ ಕಲೆತ.

ಇಳೆಯ ತೀವಿಹುದು—ಭೂಮಿಯನ್ನು ವ್ಯಾಪಿಸಿದೆ.

ಈಂಟುವ—ನೀರು ಕುಡಿಯುವ.

ಉತ್ತರಿಸು—ನಿವಾರಿಸು.

ಉಮ್ಮಳದೆ—ಸಂಕಟದಲ್ಲಿ.

ಉರಗ—ಹಾವು, ಸುರೆ-ಹೆಂಡ, ಸುರಗಿ-ಕತ್ತಿ.

ಉಲಿವತ್ತೆ—ಲೊಟಕುವ ಅತ್ತೆಯು, ಕೆಲೆವ ಪತಿ-ಬಯ್ಯುವ ಗಂಡ, ಅಳಲಿಂಗೆ-ಬೇಗೆಗೆ.

ಎಳಸುವರೆ—ಬಯಸಿದರೆ.

ಒಲುವೆಯ—ಪ್ರೀತಿಯೆಂಬ, ನಿಳಯ-ಮನೆ, ಇಳೆಗೆ-ಭೂಮಿಗೆ, (ಎಲ್ಲ ಜನರಿಗೂ), ತಳಿವುದು-ಚಲ್ಲುವುದು (ವ್ಯಾಪಿಸುವುದು), ಹಳಿಗಾಜು-"ಲೆನ್ಸ್"

[ದೂರದರ್ಶಕ, ಸೂಕ್ಷ್ಮದರ್ಶಕ ಯಂತ್ರಗಳಿಗೆ ಉಪಯೋಗಿಸುವಂಥ ಗಾಜಿನ ಉರಟು ಬಿಲ್ಲೆ, ಇದು ಕಿರಣಗಳನ್ನು ಒಂದು ಪಕ್ಕದಲ್ಲಿ ಕೇಂದ್ರೀಕರಿಸಿ ಇನ್ನೊಂದು ಪಕ್ಕದಿಂದ ಹರಡುವ ಗುಣ ಉಳ್ಳುದು. ಇದಕ್ಕೆ ಮನೆಯನ್ನು ಹೋಲಿಸಿದೆ. ಮನೆಯಲ್ಲಿ ವಿಶ್ವಾಸವನ್ನು ಬೆಳಸಿ ವಿಶ್ವಕ್ಕೆ ಹಂಚುವುದನ್ನು ಕಲಿಯಬೇಕು.]

ಒಕ್ಕೊಳಗ—ಒಂದು ಕೊಳಗ; ಒಕ್ಕುಡಿತೆ-ಒಂದು ಗುಟುಕು;

ಒಡಲಿಲ್ಲ—ಶರೀರವಿರುವುದಿಲ್ಲ, ಊಟಕೆನೆ-ಊಟಮಾಡುವುದಕ್ಕಾಗಿಯೆ, ತನುಸಾಕೆ-ದೇಹವನ್ನು ಪೋಷಿಸಲು, ಹಿಡಿಸಾಕು-ಸ್ವಲ್ಪವೇ ಸಾಕು. ಹುಡಿ-ಧೂಳು, ಹುಡಿಹುಯ್ಯು-ಹೊಟ್ಟೆಗಿಲ್ಲದಂತೆ ಮಾಡು.

ಒಪ್ಪವಿಡು—ಸ್ವಭಾವ ಮರೆಸು.

ಓದನ—ಅನ್ನ, ಶಿವಮೋದ-ಆತ್ಮಾನುಭವದ ಸಂತೋಷ.

ಓಲಯಿಕು—ಅವಲಂಬಿಸುವುದು.

ಕರನಾಲ್ಕು—ನಾಲ್ಕುಕೈಗಳು (ಚತುರ್ವಿಧ ಪುರುಷಾರ್ಥಗಳನ್ನು ಕೊಡಲು) ಕರ-(ಬೇರೆ) ಸೊಂಡಿಲು, ಶಕ್ತಿಯ ಲಾಂಛನವು.

ಕರಗದೆ—(ಕಾಯಿ) ಕೊಳೆತುಹೋಗದೆ?

ಕರಗುವ—(ಶರೀರ) ಗಳಿತವಾಗುವ.

ಕಾಲನನೆ ಅಟ್ಟುವನು—ಯಮನನ್ನು ದೂರಮಾಡುವನು. ಹೆಚ್ಚುಕಾಲ ಬದುಕುವನು.

ಕಾವನ—ರಕ್ಷಿಸುವವನ, ಓವಿದ-ಬೆಳಸಿದ, ಗಾವಿಲ-ಹೆಡ್ಡನು (ಹಳ್ಳಿಯವ)

ಕಾವಾಗ—ಕಾಯುತ್ತಿರುವಾಗ (ಬಿಸಿಪಾತ್ರೆಯು ಕಿಲುಬುವದಿಲ್ಲವೆನ್ನುವರು)

ಕಾಳಿಂಗಪುಚ್ಛ—ಕರೀನಾಗರು ಹಾವಿನ ಬಾಲವು.

ಕಿಚ್ಚುಕ್ಕು—ಬೆಂಕಿಯಿಡು (ಹಾಳುಮಾಡಿಕೊ)

ಕ್ರಿಮಿ—ನೆಲದಮೇಲಿನ ಹುಳು, ಕೀಟ-ಚಿಟ್ಟೆ. [ಪಟ್ಟೆಯ ಹುಳುವಿಗೆ ಮೊಟ್ಟೆ, ಹುಟ್ಟು, ಕುಟ್ಟೆ ಮತ್ತು ಚಿಟ್ಟೆಯೆಂಬ ನಾಲ್ಕು ರೂಪಗಳು ನಮ್ಮ ಕಣ್ಣುಮುಂದೆಯೇ ಸಲ್ಲುವವು.]

ಕುಂಭಿನಿಯ ಕಡೆಗೆ—ಭೂಮಿಯ ದಿಕ್ಕಿಗೆ (ಜೈನಾಲಿಪಿಯಂತೆ ಮೇಲಿಂದ ಕೆಳಕ್ಕೆ) ಅಂಬರದೆಡೆಗೆ-ಅಂತರಿಕ್ಷದ ಕಡೆಗೆ (ಉಷ್ಣಮಾಪಕ ಯಂತ್ರದ ರಸ ಏರುವಂತೆ) ಕೆಳಗಿಂದ ಮೇಲಕ್ಕೆ. ಅಂಕಿಗಳ ಜತೆಗಳು "೦೯" ರಿಂದ ಮೊದಲಾಗಿ "೯೦" ಯಿಂದ ಕೊನೆಗಾಣುವವು.

ಕುತ್ತುಬರೆ—(ಸುಗುಣಕ್ಕೆ) ಲೋಪಬರಲು.

ಕುತ್ತಿಲ್ಲ—ರೋಗವಿಲ್ಲ.

ಕುಸುಮಕೆ ಮಧುಪ—ಹೂವಿಗೆ ಜೇನುಹುಳು, ಮುಸುಕು-ಮುತ್ತಿಕೊಳ್ಳು, ಕುಂದು-ದೋಷ, ಪಿಸುಣಿ-ನೀಚ.

ಕುಕ್ಷಿಯ—(ತಾಯ) ಹೊಟ್ಟೆಯಲ್ಲಿರುವ,

ಕೆಳೆ—ಸ್ನೇಹ, ಕೀಳಿನಲಿ-ನೀಚರಲ್ಲಿ, ಕೂಪ-ಭಾವಿ.

ಖಲಜನ—ಕೆಟ್ಟವರು.

ಖೂಳ—ದುರುಳ.

ಗಡುವು—ಅವಧಿ (ವಿರಾಮ), ಇಷ್ಟೆಯೆ-ಮೇಲೆ ಸೂಚಿಸಿದಷ್ಟೆ (18 ವರುಷ 11 ದಿವಸ), ಬಡಶಶಿ-ಅಶಕ್ತನಾದ ಚಂದ್ರ, ದೃಢರವಿ-ಶಕ್ತನಾದ ಸೂರ್ಯ, ಬಡಿವವು-(ಗ್ರಹಣ) ತಟ್ಟುವವು. ಎಲ್ಲೆಲ್ಲೊ-ಬೇರೆಬೇರೆ ಕಡೆಗಳಲ್ಲಿ (ಎಲ್ಲ ಗ್ರಹಣಗಳೂ ಕಾಣಿಸವು).

ಗವಸಣಿಗೆ—ಮುಚ್ಚಳ.

ಗೋಗಾತ್ರವನೆಲ್ಲ—ಆಕಳ ಇಡೀಶರೀರವನ್ನು, ಹುಲ್ಲುಮಾನವ-ಅಲ್ಪನು.

ಚೆನ್ನೂಳಿಗ—ಸತ್ಕಾರ್ಯ.

ಚರಜೀವಿ—ಚಲಿಸುವ ಪ್ರಾಣಿಯು, ನೆರವಿಲ್ಲ-ಪ್ರಯೋಜಕವಲ್ಲ.

ಜಡೆಯಕುಡಿ—ಬಿಳಲಿನ ತುದಿಯು, ಮುಳುವು-ಹಾನಿಮೂಲವು.

ಜನಪದ—ನಾಡು.

ಜವರಾಯ—ಯಮನು.

ಜಿಹ್ವೆಯ—ನಾಲಗೆಯನ್ನು, ವಪುವ-ದೇಹವನ್ನು, ನಾಸೆಯ-ಮೂಗನ್ನು.

ಜಾಡನಿೂರುವುದು—ಮಾರ್ಗತಪ್ಪುವುದು.

ತತ್ತರಿಪರೆ—ಹೆದರಿ ನಡುಗುವರೆ ?

ತರತರಿಪ (ತುರು)—ಹೆದರಿ ಆದುರುವ (ಮರ)

ತಿಣುಕು—ಶ್ರಮಪಡು.

ತಿರುಳು—ಶಕ್ತಿ.

ತೀವು—ತುಂಬಿಕೊಳ್ಳು.

ದುರಿತಬೀಜ—ಪಾಪಮೂಲವು. ಅಹಂತ್ವವು-ನಾನು ನಾನುಯೆನ್ನುವಿಕೆ.

ಧುರವೆ ?—ಯುದ್ಧವು ಸಾಧ್ಯವೆ? ಪರವೆ ?--ಮೋಕ್ಷ ದೊರೆಯುವುದೆ ?

ನಿಗಮಾಗಮೋಕ್ತಿ—ವೇದದಲ್ಲು ಶಾಸ್ತ್ರಗಳಲ್ಲು ಹೇಳಿರುವ ವಚನಗಳು.

ನಿಚ್ಚಳದ—ಶುದ್ಧವಾದ.

ನಿತ್ಯಸಂಧ್ಯೆ—ಪ್ರತಿದಿನದ ಸಂಜೆಯ ವಂಧನೆ.

ನಿರುತದಲಿ—ಸದ, ಪರಮಮಂಗಳೆ-ಗೌರಿ.

ನಿಳಯು—ಮನೆ

ನೀರೋಗ—ಆರೋಗ್ಯ

ನೀರೇಜ—ಕಮಲ, ದಾರಾದಿ-ಹೆಂಡರು ಮೊದಲಾದ.

ನೋವಾಂತ ಮಾನವನೆ—ಕಷ್ಟಪಡುತ್ತಿರುವ (ಬೇರೆ) ಮನುಷ್ಯನೆ.

ಪಡಿನೆಳಲ ಅಡಿಗಳಿಗೆ—ನಮ್ಮ ನೆಳಲನ್ನು ಹೆಜ್ಜೆಯಿಂದ ಅಳೆದು ತಿಳಿದ ಅಂಕಿಗೆ, ಒಡಲೆತ್ತರ-ದೇಹದ ಎತ್ತರವನ್ನು (ಈ ಎತ್ತರವು ಸರಾಸರಿ ೫|| ಅಡಿಗಳು), ಇಡಿಯಿಂ-ಮೊತ್ತದಿಂದ.

ಮುನ್ನೆಳಲು ಕಳೆದುಹೋದ ಪೂರ್ವಾಹ್ನವನ್ನೂ, ಹಿನ್ನೆಳಲು ಉಳಿದಿರುವ ಪರಾಹ್ನವನ್ನೂ ತೋರಿಸುವವು. ನೆಳಲನ್ನು ಅಯನಗಳೂ ಅಕ್ಷಾಂಶ, ರೇಖಾಂಶಗಳೂ ಸ್ವಲ್ಪ ಮಾರ್ಪಡಿಸುವವು. ಮೈಸೂರಿನಲ್ಲಿ 20-4-1938 ರಲ್ಲು ಕೆಳಗೆ ತೋರಿಸಿರುವಂತೆ ನೆರಳನ್ನು ಪರೀಕ್ಷಿಸಿ ಈ ಪದ್ಯದ ಸೂತ್ರವು ಸಮಂಜಸವಾದುದೆಂದು ತಿಳಿಯಲಾಯಿತು.

	ಹೆಜ್ಜೆ		ಎತ್ತರ	
ಮುಂಜಗಲು :	35·5	+	5·5	ಇವುಗಳಿಂದ 42ನ್ನು ಭಾಗಿಸಿದರೆ 1ಘಂ. 2ನಿ. 6ಘಂ. ಮತ್ತು 48ನಿ. ಗಳು ಬರುವವು. ಇವು 7A.M. 12A.M. & 7P.M. ಗೆ ಸಮನಾಗುವವು.
ನಡುಹಗಲು :	1·5	+	5·5	
ಪಿಂಬಗಲು :	47.	+	5·5	

ಪದುಳವನ್ನು—ಹಿತವನ್ನು.

ಪರಗಕ್ಕು—ಅನ್ಯರಿಗೆ ಸೇರುವುದು.

ಪರಕಕ್ಕು—ಮುಂದಿನ ಜನ್ಮಕೆ ಒದಗುವುದು.

ಪರದಿ—ಮುಂದಿನಲೋಕದಲ್ಲಿ.

ಪರಮು—ಪರಮಾತ್ಮ.

ಪರವರ್ಣ—"ಗುರು" ಶಬ್ದದ ತುದಿಯ ಅಕ್ಷರವಾದ, **ರು** ಕಾರವು (ಇದು ಬಹುವಚನದ ಪ್ರತ್ಯಯವು.) ಗುರುತ್ವ-ಗೌರವ.

ಪಾತಕವ—ಪಾಪವನ್ನು, ಗೈಸಿ-ಮಾಡಿಸಿ, ಗತಿಯ ಮಿಂಚಿಪುದು-ಮೋಕ್ಷ ವನ್ನು ತಪ್ಪಿಸುವುದು.

ಪೆರೆಗೊಂದು—ಪೆರೆಗೆ-ಚಂದ್ರನನ್ನು ಕಂಡು, ಒಂದು - ಯಾವುದಾದ ರೊಂದು ನಾಯಿಯು, ಮೊರೆಕೇಳಿ - ಬಗಳುವುದನ್ನು ಕೇಳಿ, (ತಾವು ಚಂದ್ರನನ್ನು ನೋಡದಿದ್ದರೂ)

ಬಸೆ ಬೆವರು—ಮೈ ಜಿಡ್ಡು, ಬೆವರು, ಹಸುಗೆ ತೆರದುಡುಗೆ-ಚೀಲದಂಥ ಉಡುಪು (ಶರಾಯಿ, ಶರಟು, ಕಾಲುಚೀಲ)

ಬನ್ನಬಡು—ಶ್ರಮಪಡು, ಮುನ್ನಿನದ-ಹಿಂಡಿನ ತಪ್ಪುಗಳನ್ನು.

ಬನ್ನಗೊಳಿಸು—ಜರಿದು ಹೆಸರುಕೆಡಿಸು.

ಬಾಡುಂಬ—ಮಾಂಸಾಹಾರಿಯಾದ (ಕೆಲವು ಎಲೆಗಳೂ ಹೂಗಳೂ ತಮ್ಮ ಮೇಲೆ ಯಾವುದಾದರೂ ಪ್ರಾಣಿ ಕೂತಕ್ಷಣ ಮುದುರಿಕೊಂಡು, ಸಿಕ್ಕಿಬಿದ್ದ ಹುಳುವಿನ ರಕ್ತವನ್ನು ಹೀರಿಕೊಂಡಮೇಲೆ ಅರಳುವವು.)

ಬಿಕನಾಸಿ—ಲೋಭಿ, ತೆಕ್ಕೈಸಿ-ಗಂಟುಬಿದ್ದು, ತಿಕ್ಕಾಡು-ಹೆಣಗು.

ಬಿಡುವುದಳವಲ್ಲ—ಬಿಟ್ಟುತೀರದು (ಜೆಂಕಿಯನ್ನೂ ಕಣ್ಣನ್ನೂ).

ಬಿಡುವುಂಟು ಅನುಜರಿಗೆ—ಅಣ್ಣತಮ್ಮಂದಿರ ಜನನಕಾಲಗಳ ನಡುವೆ ಅವಧಿಯಿದೆ. (ಪ್ರಾಣಿಯು ಜತೆಯಲ್ಲೆ ಅದರ ಮೃತ್ಯುವೂ- ಜನಿಸುವುದು)

ಬೆನಕನ ಎಳ್ಳು—ವಿನಾಯಕನ ಚರ್ಪಿಗಾಗಿ ಎಳ್ಳುಸೇರಿಸಿ ಮಾಡಿದ ಪಂಚಕಜ್ಜಾಯ.

ಬೋನ—ಅನ್ನ, ಜಿಹಾಸೆ-ಜೇಸರ.

ಭಗಣ—ನಕ್ಷತ್ರಗಳ ಗುಂಪು.

ಮಡಿವನಕ—ಸಾಯುವವರಿಗೂ, ಹೃದ್ಯಂತ್ರ-ಯಂತ್ರದಂಥ ಹೃದಯವು ತೊಡಗು-ಕರ್ಮಮಾಡು.

ಮಧುಪ—ಜೇನುಹುಳು.

ಮಧುಪಾಯಿ—ಕುಡುಕನು.

ಮಮತೆವಾಸಲು—ಅಭಿಮಾನ ಕನ್ನಿಯಾದರೆ.

ಮಲಯಜ—ಶ್ರೀಗಂಧ, ಸೌರಭ-ಪರಿಮಳ.

ಮಸುಕುಡಿಗೆ—ಕಪ್ಪು ಉಡಿಗೆ.

ಮಸುಳುವವು—ಕಳೆದುಹೋಗುವವು. ಅಶನಕ್ಕಿಲ್ಲದಂತೆ - ತಿಂಡಿಗೂ ಗತಿಯಿರದಂತೆ.

ಮಹಿಷ—ಮಹಿಷಾಸುರ.

ಮಳೆವಿಲ್ಲು—ಕಾಮನಬಿಲ್ಲು, ಮಿಥ್ಯೆ-ಸುಳ್ಳು.

ಮಾಜುವ ಜವದಿ—ಮಾಯವಾಗುವಷ್ಟು ಬೇಗ.

ಮಾತುಳ—ಸೋದರಮಾವ.

ಮಾನಿನಿಗೆ ವೇಣುದನಿ—ಸ್ತ್ರೀಗೆ ಮೃದುನುಡಿಯು.

ಮಾರುಲಿಯೆ—ಉತ್ತರಕೊಡಲು, ಹೇಳಲಮ್ಮದೆ-ಹೇಳಲಾರದೆ.

ಮಿಡುಕದವ—ಹೆದರದವನು.

ಮಿಂಚಿಪುದು—ಮೀರಿಸುವುದು (ಉಳಿದ ಇಂದ್ರಿಯಗಳನ್ನು) ಪ. ೧೨೯

ಮಿಂಚಿಪುದು—ಕೈತಪ್ಪಿಸುವುದು (ಗತಿಯನು). ಪದ್ಯ ೨೬೭

ಮಿಳಿದಿಹವು—ಕಲೆತಿವೆ.

ಮುನ್ನಿನ—ಪೂರ್ವದ.

ಮುಸುಕು—ಹೊದಿಕೆ.

ಮುಳುವು—ಹಾನಿಯ ಮೂಲವು.

ಮೂಡಿ—ಮುಚ್ಚಳ.

ಮೂರ್ತಿವೆತ್ತಂತೆ—ಶರೀರ ಧರಿಸಿದಂತೆ.

ಮೃಡ—ಶಿವ.

ಮೃತ್ತಿಕೆ—ಮಣ್ಣು.

ಮೃತಿ—ಮರಣ.

ಮೆಲ್ಲುವುದು—ತಿನ್ನುವುದು.

ಮೇಹರುಜೆ—ಸ್ತ್ರೀಪುರುಷರರೋಗ, ಇಳಿಯುಳಿದ-ಕೊಂಬಿನ ದೀರ್ಘ ಭಾಗವು ಬಿಟ್ಟುಹೋದ.

(ಮೋಕಾರವು ಮುಕ್ಕಾದರೆ ಮೇಕಾರವಾಗುವುದನ್ನು ಉಪಮಾನವಾಗಿ ಸೂಚಿಸಿರುತ್ತೆ.)

ಮೊದಲಲ್ಲಿ—ತಿರುಳು-ಬಾಲ್ಯದಲ್ಲಿ ಬುದ್ಧಿ, ತುದಿಯಲ್ಲಿ ಹುರುಳು-ಮುಪ್ಪಿನಲ್ಲಿ ಶಕ್ತಿ, ಹದಗಾಲ-ಯೌವನ.

ಮೋದದಿಂ—ಆನಂದದಿಂದ, ಖಾದಿಕಾದೀತು-ಖಾದೀಬಟ್ಟೆ ಉಳಿಸೀತು.

ಮೋಹಕ—ಮನಸ್ಸನ್ನು ಸೆಳೆಯುವ, ಜ್ಞಾತಿ-ಒಂದೇ ಹುಟ್ಟಿಗೆ ಸೇರಿದ್ದು. (ಶರೀರವು ಯಂತ್ರದ ರೀತಿಯಲ್ಲಿದೆ).

ಮೋಕ್ಷಗಾಮಿ—ಮುಕ್ತಿಬಯಸುವವನು.

ಯೋಜಕ—ಆಳುವವನು-ನಡೆಸುವವನು.

ರುಜೆ—ರೋಗ.

ರುಧಿರ—ರಕ್ತ.

ವಪುಗೇಹದಿ—ದೇಹವೆಂಬ ಮನೆಯಲ್ಲಿ, ನಿನ್ನವನು-ಸರ್ವೇಶನಾದ ನಿನಗೆ ಅನುಬಂಧಿಯಾದ ಆತ್ಮನು.

ವಶನ ಅಶನ—ಉಡುಪು, ಆಹಾರ.

ವಿಬುಧಗೆ—ವಿದ್ಯಾವಂತನಿಗೆ.

ವಿದ್ಯುತ್ತು—ಎಲೆಕ್ಟ್ರಿಕ್ ದೀಪ.

ಶಾಸ್ತಿ—ಶಿಕ್ಷೆಯು.

ಶಿಷ್ಟನಿಗೆ—ಸಜ್ಜನಕೆ, ಉಪಕೃತಿ-ಉಪಕಾರ, ಕೃತಜ್ಞತೆ-ಸಹಾಯವನ್ನು ನೆನೆದುಕೊಳ್ಳುವ ಸುಗುಣ, ಕೃತಘ್ನತೆ-ಉಪಕಾರಕ್ಕೆ ಪ್ರತಿಯಾಗಿ ಅಪಕಾರಮಾಡುವ ದುರ್ಗುಣ.

ಸಗ್ಗಕೂ—ಸ್ವರ್ಗಕ್ಕೂ.

ಸಟೆಮಾತು—ಸುಳ್ಳು, ಕಟಿಲ-ಕುತಂತ್ರ, ಕುಹಕ-ಮೋಸ.

ವಿಮರ್ಶೆಗಳು.

ಶ್ರೀಮಾನ್ ಬಿ. ಶ್ರೀಕಂಠಯ್ಯನವರು ರಚಿಸಿರುವ **ಸೂಕ್ತಿಸುಧೆ** ಅಥವಾ "ಸರ್ವೇಶಪದಗಳು" ಎಂಬ ಗ್ರಂಥವನ್ನು ಆಮೂಲಾಗ್ರವಾಗಿ ಪರಿಶೀಲಿಸಿದೆನು. ಪ್ರಾಚೀನಕವಿಗಳ ಮೇಲ್ಪಂಕ್ತಿಯನ್ನು ಅನುಸರಿಸಿ ಇತ್ತೀಚೆಗೆ ಅನೇಕರು ಗದ್ಯ ಪದ್ಯಾತ್ಮಕವಾದ ಗ್ರಂಥಗಳನ್ನು ಹೇರಳವಾಗಿ ರಚಿಸಿಯೂ ರಚಿಸುತ್ತಲೂ ಕರ್ಣಾಟದೇವಿಯ ಸೇವೆಯನೆಸಗುತ್ತಿದ್ದರೂ, ಮುನ್ನೂರು ವರ್ಷಗಳ ಹಿಂದೆ ನಮ್ಮ ನಾಡನ್ನು ಪವಿತ್ರಗೈದ ಮಹಾನುಭಾವನಾದ ಸರ್ವಜ್ಞಕವಿಯ ದಾರಿಯಲ್ಲಿ ಯಾರೂ ದೂರ ಹೋಗಿರಲಿಲ್ಲ. ಈಗ ಈ ಲೇಖಕರು ಅಲ್ಲಿ ನುಗ್ಗಿ ಸರ್ವಜ್ಞಕವಿಯ ದ್ವಿತೀಯ ಸ್ಥಾನವನ್ನು ಪಡೆದರೆಂದು ಹೇಳಲು ಅತಿಶಯೋಕ್ತಿಯೆನಿಸದು.

ನೈಜವಾದ ಸವಿನುಡಿಗಳಿಂದ ಕನ್ನಡಿಗರನ್ನು ನೈತಿಕ ಧಾರ್ಮಿಕ ಗಾಮಿಗಳನ್ನಾಗಿ ಮಾಡುವುದೊಂದೇ ಅಲ್ಲದೆ, ಇನ್ನಾವ ಪಾಂಡಿತ್ಯವನ್ನೂ ಈ ಹೊಸ ಗ್ರಂಥದಲ್ಲಿ ಪ್ರದರ್ಶಿಸುವುದು ಇವರ ಪ್ರಕೃತೋದ್ದೇಶ ವಲ್ಲವೆಂಬುದು ಇಲ್ಲಿನ ರೂಢಿಯ ವಿಸಂಧ್ಯಾದಿಗಳ ಪ್ರಯೋಗದಿಂದ ಗೊತ್ತಾಗುವುದು. ಇವರದು ಸರ್ವಜ್ಞನ ಬರಿಯ ಅನುಕರಣವಲ್ಲ; ನೂತನ ವಿಷಯಗಳನ್ನು ಪದ್ಯಕ್ಕಾಗಿ ಇವರು ಆರಿಸಿಕೊಂಡಿರುವುದು ಸ್ವಾತಂತ್ರ್ಯ ಪ್ರೇಮವನ್ನೂ ಸೂಚಿಸುವುದು. ಈಗಿನ ವೈಪರೀತ್ಯವನ್ನು ಖಂಡಿಸುವ, ಸರಲಜೀವನವನ್ನು ಮಂಡಿಸುವ ಕೆಲಪದ್ಯಗಳನ್ನು ಉದಾಹರಿಸಬಹುದು—

ಇರುತಿರಲು ತಾಯ್ಹಾಲು । ಕುರಿಹಾಲ ಬಯಿಪರೇಂ? ॥
ತಿರುಳಿರಲು ತಾಯ ನುಡಿಯಲಿ, ಮಕ್ಕಳಿಗೆ ।
ತರವೆ ಪರಭಾಷೆ? ಸರ್ವೇಶ ॥೨೯॥

ದೇಹದಾ ಯಂತ್ರಕ್ಕೆ । ಮೋಹಕಜ್ಞಾತಿಯೊಲು ॥
ಲೋಹಯಂತ್ರವಿದೆ; ದುಡಿಸದೆ ಕೆಡಿಸುವುದು ।
ದೇಹವನೆ ಬೇಗ ಸರ್ವೇಶ ॥೬೮॥

ಚೋಟುದ್ದ ಪಯಣಕ್ಕೆ । ಮೋಟಾರ ಹತ್ತುತಿರೆ ॥
ಮೋಟಕ್ಕು ಕಾಲು, ಬಾತಿನ ರೆಕ್ಕೆಗಳ ।
ಥಾಟ ಕೆಟ್ಟಂತೆ ಸರ್ವೇಶ ॥೬೯॥

ಮೋದದಿಂ ಚೀನಾಂಬ । ರಾದಿಗಳ ಉಡುತಿರಲು ॥
ಬೂದಿಯನು ಒಡಲಿಗೆ ಬಳಿಸಿ ಕಳಿಸುವುವು ।
ಖಾದಿ ಕಾದೀತು ಸರ್ವೇಶ ॥೭೩॥

ಓದುಗರು ಈ ಸುಧೆಯನ್ನು ಪಾನಮಾಡಿ ಹೃದಯಕುಹರದಲ್ಲಿ ನೆಲೆಸಿರುವ ಕನ್ನಡದ ಅಭಿಮಾನವನ್ನು ಹೊರಚಿಮ್ಮುವರೆಂದು ನನ್ನದೊಂದು ಆಶೆ. "ಕನ್ನಡಿಗ ಕವಿಗೆ ಮುನ್ನಜಯವಕ್ಕೆ ಸರ್ವೇಶ" ಎಂದಿರುವ ಈ ಗ್ರಂಥಾಂತ್ಯದ ಪ್ರಾರ್ಥನೆಯು ಶ್ರೀ ಶ್ರೀಕಂಠಯ್ಯನವರಿಗೂ ಅನ್ವಯಿಸುವಂತಾಗಲಿಯೆಂದು ಹಾರೈಸುತ್ತೇನೆ.

ಸಿ ಗುರುಶಾಂತಶಾಸ್ತ್ರಿ,

1-8-1938. ಅಸ್ಥಾನ ಮಹಾವಿದ್ವಾನ್.

ಈ ಗ್ರಂಥದಲ್ಲಿ ಮಕ್ಕಳ ಮಗ್ಗಿಯಿಂದ ಮುದುಕರ ಮುಕ್ತಿಯವರೆಗೂ ಅಮೋಘವಿಷಯಗಳು ಅಡಗಿವೆ. ಉಪಮಾನಗಳು ಬಹು ಮನೋಜ್ಞವಾಗಿಯೂ, ನೂತನವಾಗಿಯೂ ಇವೆ. ದೇಶಪದ್ಧತಿಯು ಎಲ್ಲ ಮೈಸೂರು ಮಕ್ಕಳ ತುದಿನಾಲಗೆಯ ಮೇಲೆ ನಲಿಯಬೇಕಾದುದು; ಸೃಷ್ಟಿಪದ್ಧತಿಯನ್ನು ಎಲ್ಲರೂ ಓದಿ ಆನಂದಿಸಬೇಕಾದುದು; ಅರ್ಥಪದ್ಧತಿಯು ಬಡವರಿಗೆ ಧೈರ್ಯತರುವಂತಹುದು; ಒಟ್ಟಿನಲ್ಲಿ ಈ "ಸೂಕ್ತಿಸುಧೆಯು" ಅನ್ವರ್ಥವಾಗಿ ಹೊರಬಿದ್ದಿದೆ.

ಯಂ. ನರಸಿಂಹಯ್ಯ,

2-8-1938. ಸಂಸ್ಕೃತಪಂಡಿತರು ಮಿರ್ಜ ಹೈಸ್ಕೂಲ್, ಮೈಸೂರು.

ಶ್ರೀಯುತ ಬಿ. ಶ್ರೀಕಂಠಯ್ಯನವರು ರಚಿಸಿರುವ **ಸೂಕ್ತಿಸುಧೆಯು** ನನ್ನ ಕರಗತವಾಗಿ ಏಕಕಾಲದಲ್ಲಿ ಮೋದಖೇದಗಳನ್ನು ಉಂಟುಮಾಡಿತು. ಇವರು ಇಂಥಾ ಗ್ರಂಥಗಳನ್ನು ಬರೆದುದಕ್ಕೆ ಮೋದ; ಈ ಶಕ್ತಿಗೆ ಅಡ್ಡಿಯಾದ ಆಬ್ಕಾರಿ ಇಲಾಖೆಯಲ್ಲಿ ಅರ್ಧಾಯುಷ್ಯ ಕಳೆಕೊಂಡುದಕ್ಕೆ ಖೇದ; ಇರಲಿ.

ಕೀರ್ತನೆಗಳಮೂಲಕ ಜನಸೇವೆ ಹಾಗೂ ಜನಾರ್ಧನನಸೇವೆ ಸಲ್ಲಿಸುತ್ತಿರುವ ನನಗೆ ಸುಭಾಷಿತಗಳೆಂದರೆ ಪ್ರಾಣ. ಈ ಸೂಕ್ತಿಸುಧೆಯನ್ನು ಅಮೃತವಾಣಿಗಳ ಸಂಚಯಕ್ಕೆ ಆನಂದದಿಂದ ಸೇರಿಸಿಕೊಂಡಿರುವೆನು. ಈ ಸುಧಾಕಣಗಳನ್ನು ಕೀರ್ತನಕಾಲದಲ್ಲಿ ಆಗಾಗ್ಯೆ ಮಹಾಜನರಲ್ಲಿ ಬೀರಲು ಬಯಸುವೆನು.

ಈ ನುಡಿಮಾಣಿಕಗಳ ಹೆಚ್ಚುಳವೇನೆಂದರೆ ಇವು ಸರ್ವಮತ ಸಮ್ಮತಗಳಾಗಿವೆ. "ವೀರಶೈವ, ಆಧ್ಯಾತ್ಮಪ್ರಕಾಶ, ವೃತ್ತಾಂತಪತ್ರಿಕೆ" ಮೊದಲಾದವು ಮೆಚ್ಚಿಕೊಂಡಿರುವುದೇ ಇದಕ್ಕೆ ಸಾಕ್ಷಿ. ಆದುದರಿಂದ ಇದು ಸರ್ವಗ್ರಾಹ್ಯವಾದ ಏಕಮಾತ್ರಗ್ರಂಥವು.

ಆಂಗ್ಲ ಕವಿಯೊಬ್ಬನು "**ಗ್ರಂಥರಹಿತ ಗೇಹವು ಆತ್ಮರಹಿತ ದೇಹಕ್ಕೆ ಸಮ**"ವೆಂದಿರುವನು. ಸವಿನುಡಿಯ, ಸುಲಭಶೈಲಿಯ, ಸುಲಭ ಬೆಲೆಯ ಈ ಸುಂದರವಾದ ಪುಸ್ತಕವನ್ನು ಎಲ್ಲರೂ ಸಂಗ್ರಹಿಸುವರೆಂದು ನಂಬುತ್ತೇನೆ.

ಟಿ. ಕೆ. ವೇಣುಗೋಪಾಲದಾಸ್,
ಹರಿಕಥಾಂಬುಧಿಚಂದ್ರ,
ತುಂಕೂರು,

ಈ ಗ್ರಂಥವು ಅಲಂಕಾರಗಳಿಂದ ಕೂಡಿ, ಹೆಚ್ಚು ವ್ಯಾಕರಣ ದೋಷಗಳಿಲ್ಲದೆ, ಛಂದಶ್ಯಾಸ್ತ್ರದ ಎಲ್ಲೆಯನ್ನು ಅತಿಕ್ರಮಿಸದೆ ಸಾಹಿತ್ಯ ದೃಷ್ಟಿಯಿಂದ ಉತ್ತಮವಾಗಿರುವುದಲ್ಲದೆ ಆಬಾಲವೃದ್ಧರಿಗೂ ಅತ್ಯಂತ ಉಪಯೋಗಕರವಾದ ನೀತಿಗಳನ್ನು ತಿಳಿಸುವದಾಗಿರುತ್ತದೆ.

ಸರ್ವಜ್ಞನು ಕನ್ನಡಿಗರಿಗೆ ಹೇಗೆ ಪ್ರೀತಿಪಾತ್ರನಾಗಿರುವನೋ ಆದರಂತೆ ಶ್ರೀಯುತ ಬಿ. ಶ್ರೀಕಂಠಯ್ಯನವರೂ ಈ ನೀತಿಬೋಧಕ ಗ್ರಂಥ ರಚಿಸಿ ಕನ್ನಡಿಗರ ಪ್ರೀತಿಗೆಪಾತ್ರರಾಗಿರುತ್ತಾರೆಂದು ದೃಢವಾಗಿ ನಂಬಿರುತ್ತೇನೆ.

Vidwan H. Gunda Sastry,
24-10-1938. Pandit, Govt. High School,
DAVANGERE.

ಇವರ ಪದ್ಯಗಳಲ್ಲಿ ನೈತಿಕವಿಷಯವು ನಲಿದಾಡುತ್ತಿರುವುದು ಅಲ್ಲದೆ ನೂತನವಿಷಯುಗಳ ಭಾವವು ಕೆಲವು ಪದ್ಯಗಳಲ್ಲಿ ಪ್ರಕಾಶಿಸುತ್ತಿರುವುದು. ಪದ್ಯಗಳಲ್ಲಿರುವ ಕಠಿನಶಬ್ದಗಳಿಗೆ ಅರ್ಥವನ್ನೂ ಸಹ ತೋರಿಸಿರುವರು. ಈವರೆಗೆ ಸರ್ವಜ್ಞನ ಮಾರ್ಗವನ್ನು ಯಾರೂ ಅನುಸರಿಸಿಲ್ಲವೆಂದು ತೋರುತ್ತದೆ. ಇವರು ಕಷ್ಟಪಟ್ಟು ಆ ಮಾರ್ಗವನ್ನು ಹಿಡಿದಿರುವದು ಜನತೆಗೆ ಉಪಕಾರಕವಾಗಿದೆ. ಪುಸ್ತಕವು ಸರ್ವಸಂಗ್ರಾಹ್ಯವಾಗಿದ್ದು ಸುಂದರವಾಗಿ ಮುದ್ರಿಸಲ್ಪಟ್ಟಿದೆ.

26—9—38, **ಪಂಚಾಚಾರ್ಯಪ್ರಭಾ.**

Literature like society cannot afford to be static. We are at a stage when Western civilisation is beginning to shed its glamour for us and we are in a state of introspection. Old things have either been lost through neglect or become less significant due to altered conditions. Any attempt, therefore, to present those fundamental truths touching human lives in new settings and at the same time to guide us to the hidden treasures of the past is to be welcomed.

Literary merits apart, "*Sookthi Sudhe*" is a representation of the old gems in a setting with a modern touch. The 320 verses of this book are divided into two major parts. In the first part the author deals with factors concerning our daily lives and in the second with conduct favourable for happiness in the other life.

The verses are modelled on the lines of the famous *Sarvanga Padas* and the author has affixed his seal as **Sarvesa** to the verses under review.

The ethical and moral principles enunciated through the medium of these *Sarvesa Padas* are fundamental and need no comment. But mention may be made of one or two points.

The author has expressed his intense love for Kannada and pleaded for a reform in the script

(25 verse). His ideas on the subject are given in an appendix. Similarly his historical references in the verses are supplemented by detailed notes.

The chemical composition of water, the undesirability of using milled rice, and white sugar, the appeal for the use of Khadi and the reference to motor cars are some of the modern touches given by the author when setting out the factors that should govern a person's life and conduct. The enunciation of certain simple rules of arithmetic and the reference to eclipses, days in the month, etc., also deserve mention.

The author's poetry is of a high order and the language is also simple. The book deserves to be welcomed by all lovers of Kannada.

27-11-1938. **HINDU**

[ಮೇಲಿನ ಇಂಗ್ಲೀಷಿನ ಸರಳಾನುವಾದ]

ಸಾಹಿತ್ಯವು (ಜನತೆಯ ಪರಿಸ್ಥಿತಿಯೂ) ಇದ್ದಂತೆಯೇ ಇರತಕ್ಕುದಲ್ಲ. ಈಗ ಪಡುವಣರ ನಾಗರೀಕತೆಯು ನಮ್ಮನ್ನು ಬೆರಗುಗೊಳಿಸ ಹತ್ತಿದೆ. ನಾವೂ ಸ್ವಸತ್ವವನ್ನು ಅರಿದುಕೊಳ್ಳುತ್ತಿರುವೆವು. ಹಿಂದಿನ ಮೇಲ್ಮೆಯು ನಮ್ಮ ಅನಾದರಣೆಯಿಂದ ನಂದಿತು; ಇಲ್ಲವೆ, ಸ್ಥಿತಿಗಳ ಬದಲಾವಣೆಯಿಂದ ಕಂದಿತು. ಜೀವನದ ಜೀವಾಳಕ್ಕೆ ಸಂಬಂಧಿಸಿದ ಅಂಶಗಳನ್ನು ನೂತನರೂಪದಲ್ಲಿ ನಿರೂಪಿಸುವ, ಹಾಗೂ, ಮರೆತುಗೊಂಡ ಪೂರ್ವದ ಅಪೂರ್ವ ರತ್ನಭಾಂಡಾಗಾರಕ್ಕೆ ನಮ್ಮನ್ನು ಕೊಂಡೊಯ್ಯುವ ಎಲ್ಲ ಪ್ರಯತ್ನವೂ ಆದರಣೀಯುವು.

ಸೂಕ್ತಿಸುಧೆಯು ಇಂಥ ರತ್ನಗಳ ಹೊಸತರದ ಒಡ್ಡಣೆಯು. ಇಲ್ಲಿರುವ ೩೨೦ ಪದ್ಯಗಳು ಎರಡು ಮುಖ್ಯಭಾಗಗಳಾಗಿ ವಿಂಗಡಿಸಲ್ಪಟ್ಟಿವೆ. ಮೊದಲದರಲ್ಲಿ ದಿನದಿನದ ಬಾಳಿಗೆ ಮೇಳೈಸುವ ಹೊಂಚಿಕೆಗಳೂ ಎರಡನೆಯದರಲ್ಲಿ ಮುಂದಿನ ಮಂಗಳಕ್ಕೆ ಬೇಕಾದ ಸಂಚುಗಳೂ ಹೇಳಲ್ಪಟ್ಟಿವೆ.

ಪದ್ಯಗಳು ಹೆಸರಾದ ಸರ್ವಜ್ಞಪದಗಳ ಮಾದರಿಯಲ್ಲಿವೆ. ಇವಕ್ಕೆ ಗ್ರಂಥಕರ್ತರು **ಸರ್ವೇಶ**ನೆಂಬ ಅಂಕಿತ ಕೊಟ್ಟಿರುವರು. ಈ ಸರ್ವೇಶ ಪದಗಳಲ್ಲಿ ವರ್ಣಿತವಾದ ಧಾರ್ಮಿಕ-ನೈತಿಕವಿಚಾರಗಳು ಸ್ಥಿರತತ್ವಗಳಾಗಿವೆಯಾಗಿ ಅವನ್ನು ಕುರಿತು ಟೀಕಿಸುವಂತಿಲ್ಲ.

ಕನ್ನಡದ ಬಗ್ಗೆ ಗ್ರಂಥಕರ್ತರು ಉಜ್ವಲ ಪ್ರೇಮ ಪ್ರದರ್ಶಿಸಿರುವರು. ಲಿಪಿಸಂಸ್ಕರಣವನ್ನು ಬಲು ಬಯಸುವರು. (೨೫ಪದ್ಯ.) ಈ ಬಗ್ಗೆ ಸಲಹೆಯನ್ನು ಅನುಬಂಧದಲ್ಲಿ ವಿವರಿಸಿರುವರು. ಅಂತೆಯೇ, ಪದ್ಯಗಳಲ್ಲಿ ಸೂಚಿತವಾದ ಐತಿಹಾಸಿಕವಿಷಯವನ್ನು ಅನುಬಂಧದಲ್ಲಿವಿಶಧೀಕರಿಸಿರುವರು

ನೀರು ಹುಟ್ಟಿದಬಗೆ, ಯಂತ್ರದ ಅಕ್ಕಿ ಬಿಳಿಯಸಕ್ಕರೆಗಳ ತ್ಯಾಜ್ಯ, ಖಾದಿಯ ಪರಿಗ್ರಹ, ಮೋಟಾರು ಪ್ರಯಾಣಗಳನ್ನು ಕುರಿತವು—ಜನರ ನಡವಳಿಕೆಯಲ್ಲಿನ ನವೀನತೆಯನ್ನು ವರ್ಣಿಸುವ ಪದ್ಯಗಳಲ್ಲಿ—ಕೆಲವಾಗಿವೆ. ಗಣಿತದ ಕೆಲವು ಸರಳತತ್ವಗಳು ಗ್ರಹಣಗಳು, ಹೂಣಮಾಸಗಳ ದಿನಸಂಖ್ಯೆ ಮುಂತಾದುವನ್ನು ಕುರಿತ ಪದ್ಯಗಳು ಹೇಳಿಸಿ ಕೊಳ್ಳುವಂತಿವೆ.

ಈ ಉತ್ತಮ ಕವನ ಸರಳ ಭಾಷೆಯಲ್ಲಿದ್ದು ಕನ್ನಡ ಪ್ರೇಮಿಗಳೆಲ್ಲರು ಸಂಗ್ರಹಿಸಲು ಅರ್ಹವಾಗಿದೆ.

ಕನ್ನಡಕವಿಶ್ರೇಷ್ಠರಲ್ಲಿ ರತ್ನಪ್ರಾಯನಾಗಿರುವ ಸರ್ವಜ್ಞನು ತನ್ನ ಪದ್ಯಗಳಲ್ಲಿ ಅಂದು ತನ್ನ ಕಣ್ಣಿಗೆ ಬಿದ್ದ ಕಿವಿಗೆ ಕೇಳಿದ ಲೋಕನೀತಿ, ಧರ್ಮಸೂಕ್ಷ್ಮ. ಹಲವು ಐಹಿಕ ಪಾರತ್ರಿಕ ವಿಚಾರಗಳು ಮುಂತಾದುವನ್ನೆಲ್ಲ ತನ್ನ ನಿರ್ದಾಕ್ಷಿಣ್ಯವಾಣಿಯಿಂದ ನುಡಿದಿರುವಂತೆಯೇ, ಶ್ರೀಮಾನ್ ಶ್ರೀಕಂಠಯ್ಯನವರು ಇಂದು ವಿಜ್ಞಾನ ದೃಷ್ಟಿಯಿಂದ ನಮ್ಮ ನಿತ್ಯ ವ್ಯವಹಾರಕ್ಕೆ ವಿಷಯವಾಗಿರುವ ಹಲವು ವಿಚಾರಗಳನ್ನೂ, ಸಮಾಜದಲ್ಲಿ ಕಂಡುಬರುತ್ತಿರುವ ಹಲ ಕೆಲವು ಲೋಪಗಳನ್ನೂ ಹದಿನೈದು ಪದ್ಧತಿ ಅಥವಾ ವಿಭಾಗಗಳಲ್ಲಿ ನೇಯ್ದುಕೊಟ್ಟಿರುವರು. ಪದ್ಯಗಳು ಸಣ್ಣ ಸಣ್ಣ ಅನುಭಾವಿಕ ಪದಪುಂಜಗಳಿಂದ ಮನೋಹರವಾಗಿರುವುವು. ಶ್ರೀಕಂಠಯ್ಯನವರ ಈ ಬಗೆಯ ಭಾಷಾಸೇವೆಯು ಬಹುದಿನಗಳಿಂದಲೂ ನಡೆದುಬರುತ್ತಿರುವುದು. ಮಹನೀಯರಾದ ಕನ್ನಡಭಾಷಾಭಿಮಾನಿಗಳ ಪ್ರೋತ್ಸಾಹದಿಂದ ಅದು ಇನ್ನೂ ಹೆಚ್ಚುವುದರಲ್ಲಿ ಸಂಶಯವಿಲ್ಲ.

೧೯೩೮ನೇ ನವಂಬರ್, **ಸುಬೋಧ.**

ರಾಜಭಕ್ತಿಮುಕ್ತಾವಳಿ ಮೊದಲಾದ ಗ್ರಂಥಗಳನ್ನು ಬರೆದ ಶ್ರೀ ಬಿ. ಶ್ರೀಕಂಠಯ್ಯನವರು ಈ ಸೂಕ್ತಿಸುಧೆಯನ್ನು ರಚಿಸಿದ್ದಾರೆ. ಸರ್ವಜ್ಞಪದಗಳ ಧಾಟಿಯಲ್ಲಿ "ಸರ್ವೇಶ" ಎಂಬ ಅಂಕಿತದೊಂದಿಗೆ ಕವಿಗಳು ಹಲವು ಮನೋಜ್ಞವಾದ ವಿಷಯಗಳನ್ನು ಕವನಗಳಾಗಿ ಹೆಣೆದಿದ್ದಾರೆ. ಕನ್ನಡಿಗರೆಲ್ಲರೂ ಅತ್ಯವಶ್ಯವಾಗಿ ಓದಲೇಬೇಕಾದ ಪುಸ್ತಕ.

5-10-1938. **ಕರ್ಣಾಟಕಬಂಧು.**

ಆಧುನಿಕ ಕನ್ನಡ ಸಾಹಿತ್ಯಕ್ಕೆ ಇದೊಂದು ಅಮೌಲ್ಯವಾದ ಕಾಣಿಕೆ ಯೆಂದು ಧಾರಾಳವಾಗಿ ಹೇಳಬಹುದು. ಸರಳಶೈಲಿಯಲ್ಲಿ ಎಲ್ಲರಿಗೂ ತಿಳಿಯುವಂತೆ ನೀತಿಬೋಧೆಯಾಗುವಂತೆ ದೇಶಾಭಿಮಾನ, ರಾಜಭಕ್ತಿ, ದೈವಭಕ್ತಿ, ಹೆಚ್ಚುವಂತೆ ಈ ಗ್ರಂಥದಲ್ಲಿಯ ಸೂಕ್ತಿಗಳು ರಚಿಸಲ್ಪಟ್ಟಿವೆ.

ಈ ಗ್ರಂಥಕ್ಕೆ ರಾಜಸೇವಾಸಕ್ತ ಶ್ರೀ ಬಿ. ಎಂ. ಶ್ರೀಕಂಠಯ್ಯನವರು ಮುನ್ನುಡಿಯನ್ನು ಬರೆದಿರುತ್ತಾರೆ. ಇದು ಪದ್ಯಗ್ರಂಥ. ಇದರ ಲ್ಲಿರುವ ಸೂಕ್ತಿಗಳಲ್ಲಿ **ಸುಧೆ**ಯನ್ನು ಸಹಜವಾಗಿಯೂ ಸೇವಿಸಬಹುದು. ಓದುಬರಹ ಬರದವರು ಸಹಾ ಈ ಸೂಕ್ತಿಗಳನ್ನು ಓದಿಸಿ ಕೇಳಿ ಆನಂದಿಸ ಬಹುದು. ಮಕ್ಕಳಿಗೂ ಪ್ರಾಪ್ತವಯಸ್ಕರಿಗೂ ಸರ್ವರಿಗೂ ಉಪಯುಕ್ತ ವಾಗಿರುತ್ತದೆ. ಸರ್ಕಾರದ ವಿದ್ಯಾಇಲಾಖೆಯವರೂ ಸಾಹಿತ್ಯಪ್ರೇಮಿಗಳೂ ಸಾರ್ವಜನಿಕರೂ ಈ ಗ್ರಂಥಕ್ಕೆ ಪ್ರೋತ್ಸಾಹ ಬೆಂಬಲಗಳನ್ನು ಕೊಟ್ಟು ಗ್ರಂಥಕರ್ತರ ಸಾಹಿತ್ಯಸೇವೆಯನ್ನು ಅಭಿವೃದ್ಧಿಗೊಳಿಸಬೇಕೆಂದು ಕೋರುತ್ತೇವೆ.

28-10-1938 **ತಾಯಿನಾಡು.**

ಮಾನವನ ನೀತಿಯನ್ನು ಉತ್ತಮಪಡಿಸುವ ಅನೇಕ ಅಮೂಲ್ಯ ವಾದ ಪದ್ಯಗಳಿವೆ. ಸುಲಭವಾಗಿಯೂ, ಮನಮೋಹಕವಾಗಿಯೂ, ಜನರ ಬಳಕೆಯ ಮಾತಿನಲ್ಲಿ ಗಾದೆಯಂತೆ ಹೊಂದಿಕೊಳ್ಳುವಂತೆಯೂ ವಿಷಯಗಳು ನಿರೂಪಿಸಲ್ಪಟ್ಟಿವೆ. ಗ್ರಂಥಕರ್ತರು ಈಗಾಗಲೇ ಅನೇಕ ಪುಸ್ತಕಗಳನ್ನು ಪ್ರಕಟಿಸಿ ಭಾಷಾಸೇವೆಯನ್ನು ಮಾಡಿದ್ದಾರೆ. ಅಲ್ಲದೆ ಕನ್ನಡ ಲಿಪಿ ಸುಧಾರಣೆಗಾಗಿ ಬಹಳ ಶ್ರಮಪಡುತ್ತಿದ್ದಾರೆ. ಅವರ ಈ ಗ್ರಂಥವೂ ಕನ್ನಡಿಗರ ಮನ್ನಣೆಗೆ ಪಾತ್ರವಾಗುವುದರಲ್ಲಿ ಸಂದೇಹವಿಲ್ಲ.

25—9—38, **ಸಾಧ್ವಿ.**

ರಾಜಧಾನಿಯಲ್ಲಿರುವ ಮ|| ಬಿ. ಶ್ರೀಕಂಠಯ್ಯನವರು ಸುಪ್ರಸಿದ್ಧವಾದ ಸರ್ವಜ್ಞಪದಗಳ ಶೈಲಿಯನ್ನೇ ಅನುಸರಿಸಿ ಅವುಗಳಂತೆಯೇ ನೀತಿಬೋಧಕವಾಗಿ ಬಾಲಕ ಬಾಲಕಿಯರ ತುದಿನಾಲಿಗೆಯಲ್ಲಿಯೂ ನಲಿದಾಡುತ್ತಿರುವಂತೆ ಸುಲಲಿತ ಭಾಷೆಯಲ್ಲಿ **ಸರ್ವೇಶ** ಪದಗಳನ್ನು ಕವನ ಮಾಡಿರುತ್ತಾರೆ. **ನಿತ್ಯಜೀವನ** ಮತ್ತು **ಪರಸಾಧನ** ಎಂಬೀ ಮುಖ್ಯ ವಿಷಯುಗಳಿಗೆ ಸಂಬಂಧಪಟ್ಟ ಅನೇಕಾನೇಕ ವಿಷಯುಗಳು ಅಡಗಿರುತ್ತವೆ. "ಹಿಂಡಿನೊಳು ತಾಯನ್ನೇ ಕಂಡರಿವ ಮರಿಯಂತೆ........ನಿನ್ನನಾ ಕಂಡು ಕೊಳೆ ಕಲಿಸೊ ಸರ್ವೇಶ", "ನಿನ್ನಂತೆ ನಾನಾಗೆ ಕಲಿಸೊ ಸರ್ವೇಶ" ಎಂಬೀ ಮಾತುಗಳಲ್ಲಿ ಭಕ್ತಿರಸವು ಹೊರಸೂಸುತ್ತಿದೆ. ಈ ಪುಸ್ತಕದ ಅಂತ್ಯಭಾಗದಲ್ಲಿ ಲಘುಟಿಪ್ಪಣಿಯೂ ಮೈಸೂರು ಸಂಸ್ಥಾನದ ಸಂಕ್ಷೇಪ ಚರಿತ್ರೆಯೂ ಇವೆ. ಈ ಪುಸ್ತಕದ ಅಮೂಲ್ಯತೆಯು ನಮ್ಮ ವಿದ್ಯಾಭ್ಯಾಸ ಇಲಾಖೆಯವರ ಅವಗಾಹನಕ್ಕೆ ಬಾರದಿರಲಾರದೆಂದು ನಿರೀಕ್ಷಿಸುತ್ತೇವೆ.

6—10—38, **ವೃತ್ತಾಂತ ಪತ್ರಿಕೆ.**

ಆಧುನಿಕ ಕರ್ಣಾಟಕ ಸಾಹಿತ್ಯಾಚಾರ್ಯರೆನಿಸಿಕೊಂಡಿರುವ ಶ್ರೀ|| ಬಿ. ಎಂ. ಶ್ರೀಕಂಠಯ್ಯನವರು ಇದಕ್ಕೆ ಒಂದು ಮುನ್ನುಡಿಯನ್ನು ಬರೆದು ಕೊಟ್ಟಿರುವರೆಂಬುದೇ ಗ್ರಂಥದ ಹೆಗ್ಗಳಿಕೆಗೆ ಸಾಕಾಗಿದೆ. ಸುಭಾಷಿತಗಳೂ ಪದ್ಯಗಳೂ ಬಲು ಕಡಿಮೆಯಾಗಿರುವ ಈ ಕಾಲದಲ್ಲಿ, ಹೃದಯಂಗಮವಾದ ಈ ಪದಗಳು ಹುಟ್ಟಿರುವದು ಶುಭಚಿಹ್ನೆಯೇ ಸರಿ.

ನವಂಬರ್ 1938. **ಅಧ್ಯಾತ್ಮಪ್ರಕಾಶ.**